ಮೀನು ಮತ್ತು ಹುಡುಗಿ



ಶಾಂತಾನಾಯಕ ಶಿರಗಾನಹಳ್ಳಿ

ಮೀನು ಮತ್ತು ಹುಡುಗಿ

[ಕವನ ಸಂಕಲನ]

ಶಾಂತನಾಯ್ಕ ಶಿರಗಾನಹಳ್ಳಿ

೨೦೦೨

ಅನಿಕೇತನ ಪ್ರಕಾಶನ, ಕಾರವಾರ

MEENU MATTU HUDUGI- A collection of Poems in Kannada
Written by Shant Naik, Siraganhalli
No. C-3, AIR Staff quarters, Kajubag-Karwar
Published by Aniketana Prakashan
Smt. Dakshayani S. Naik

First Edition ; 2002 Copies ; 1000
Copy Right : Publisher Price ; 60 /-
Pages ; viii + 80 = 88 Size : Demay 1/8
Printed at ; Kambale Printers, Gadag

ಮೀನು ಮತ್ತು ಹುಡುಗಿ — ಕವನ ಸಂಕಲನ

ಲೇಖಕರು : ಶಾಂತನಾಯ್ಕ ಶಿರಗಾನಹಳ್ಳಿ
ಮನೆ ಸಂಖ್ಯೆ ಸಿ–೩,
ಆಕಾಶವಾಣಿ ವಸತಿ ಸಂಕೀರ್ಣ
ಕಾಜುಬಾಗ–ಕಾರವಾರ
ದೂರವಾಣಿ : (೦೮೩೮೨) ೨೭೭೭೬

ಪ್ರಕಾಶಕರು : ಶ್ರೀಮತಿ ದಾಕ್ಷಾಯಣಿ ಎಸ್. ನಾಯಕ
ಅನಿಕೇತನ ಪ್ರಕಾಶನ,
C/O, ಮನೆ ಸಂಖ್ಯೆ ಸಿ–೩,
ಆಕಾಶವಾಣಿ ವಸತಿ ಸಂಕೀರ್ಣ,
ಕಾಜುಬಾಗ, ಕಾರವಾರ

ಹಕ್ಕುಗಳು : ಪ್ರಕಾಶಕರವು
ಪ್ರಥಮ ಮುದ್ರಣ : ೨೦೦೨
ಪ್ರತಿಗಳು : ೧೦೦೦
ಪುಟಗಳು : viii + ೮೦ = ೮೮
ಬೆಲೆ : ೬೦/– (ಅರವತ್ತು ರೂಪಾಯಿಗಳು)
ಮುಖಪುಟ ಕಲೆ : ಎ. ಆರ್. ಸುರೇಶ್
ಮುದ್ರಕರು : ಕಾಂಬಳೆ ಪ್ರಿಂಟರ್ಸ್
ಇದಗಾ ಕಾಂಪ್ಲೆಕ್ಸ್,
ವಿವೇಕಾನಂದ ರೋಡ, ಗದಗ

ಅರ್ಪಣೆ

ಹಿರಿಯಣ್ಣ ವೈ. ಆರ್ ಲಮಾಣಿ
ಯವರಿಗೆ—

ಎರಡು ಮಾತು

'ಮೀನು ಮತ್ತು ಹುಡುಗಿ' ಶಾಂತನಾಯ್ಕರ ಪ್ರಥಮ ಕವನ ಸಂಕಲನ. ಹಲವಾರು ಉತ್ತಮ ಕವಿತೆಗಳನ್ನು ನೀಡಿರುವ ಈ ಕವಿಗೆ ಸಾಮಾಜಿಕ ಕಳಕಳಿ ಇದೆ, ಪ್ರಗತಿಪರ ವಿಚಾರವಿದೆ, ಅಭಿವ್ಯಕ್ತಿಸುವ ಹುರುಪಿದೆ.

ಜೊತೆಗೇ ಪ್ರಥಮ ಸಂಕಲನದಲ್ಲಿ ನುಸುಳಬಹುದಾದ ವಾಚ್ಯ, ದ್ವಂದ್ವ, 'ಹಸಿ' ತನಗಳಂತಹ ಲೋಪ–ದೋಷಗಳೂ ಇವೆ. ಮುಂದಿನ ಸಂಕಲನಗಳಲ್ಲಿ ಇಂತಹ ಸಿಗುರನ್ನೆಲ್ಲ ಸುಲಿದು ಹಾಕಿ, ಅಪ್ಪಟ ತಿರುಳನ್ನು ನೀಡುವ ಕಲೆಗಾರಿಕೆ ಇವರಲ್ಲಿದೆ ಎಂಬುದು ಸಮಾಧಾನದ ಸಂಗತಿ.

ಈ ಮಾತಿಗೆ ಪೂರಕವಾಗಿ ಸಂಕಲನದ 'ಅಶೋಕನ ಶೋಕ' ಗಮನಿಸಬಹುದು:

> "ಅಶೋಕ ಶೋಕ ತಪ್ತನಾಗಿದ್ದ
> ಅಸಹಾಯಕ ಬದುಕು ಅಸಹನೀಯವಾದುದು ಕಂಡು
> ಕಳಿಂಗ ನಾಡಿನ ಬಿಳಿ ಮಣ್ಣು
> ಕೆಂಪಡರಿ ತಂಪಾಗಿ ರಕ್ತದ ಪಿಪಾಸೆಯಾಗಿದ್ದ ಕಂಡು
> ಕನಸುಗಾಣದ ಮನಸುಗಳು
> ರಣರಂಗದಲಿ ಹೆಣವಾಗಿ ಉರುಳಿದ್ದವು........
> ....
> ನಿರಪರಾಧಿಗಳ ಕೊಯ್ದು ಕುತ್ತಿಗೆ
> ಮತ್ತೆದ್ದು ಮಾತಾಡಿ
> ಅದಾವ ದ್ರೋಹ ಮಾಡಿದ್ದೆವು
> ದೊರೆ ನಿಮಗೆ ?"
> ....

ಯುದ್ಧದ ಭೀಕರತೆಯನ್ನು ಕಂಡು ಅಶೋಕನ ಮನ ಪರಿತಪಿಸಿದೆ. "ಎದೆಯೊಳಗಿನ ನೋವು, ಕಾವಾಗಿ ಕನವರಿಸಿದನಾತ, ಬುದ್ಧ ಅಹಿಂಸೆಯ ಸಾರಿದ, ಜಾಡು ಹಿಡಿದ, ಮತ್ತೆ ಮರಳದೆ" ಎಂಬ ಸಾಲುಗಳು ಬುದ್ಧನ ತತ್ತ್ವಕ್ಕೆ ಶರಣಾದ ದೊರೆ ಅಶೋಕ, ಮತ್ತೆ ಹಿಂದಿರುಗಿ ನೋಡದೆ ಬುದ್ಧನ ಮಾರ್ಗದಲ್ಲಿ ದೃಢವಾದ ಹೆಜ್ಜೆ ಹಾಕಿದ ಹಿರಿಮೆಯನ್ನು ಸಾರಿ ಹೇಳುತ್ತದೆ.

'ಟ್ರಂಕ್ ಮತ್ತು ಇತಿಹಾಸ' ಮತ್ತೊಂದು ಗಮನಾರ್ಹ ಕವಿತೆ. "ಅವ್ವನ ಹರಕು ಸೀರೆ, ಅಪ್ಪನ ತಾತಾನೂತೂತಾದ ಧೋತರ, ಉಡಲು ಬಾರದ ನನ್ನ ಹಳೆ ಅಂಗಿ, ಒಂದಿಷ್ಟು ಹರಕು ಅರವಿ...." ಇರುವ ಆ ಪುರಾತನ ಟ್ರಂಕ್ "ಮೇಲೆತ್ತಿದರೆ

ಯಾರೋ ಸತ್ತರೆಂಬಂತೆ ಶೋಕ...." ಮಾಡಿದರೂ ಸಹ ಅವ್ವ ಕೂಡಿಟ್ಟ ಕೈ ಕಾಸಿನ ರಹಸ್ಯ ನಿಧಿಯನ್ನು ತನ್ನಲ್ಲಿ ಅಡಗಿಸಿಕೊಂಡಿದೆ !

ನಾಲ್ಕು ಮೂಲೆಗಳೂ ಮುರಿದು, ಮೇಲಿನ ಮುಚ್ಚಳ-ಬೀಗ ಕಾಣದೆ ಗುಡಿಸಲ ಮೂಲೆಯಲ್ಲಿ ಬಿದ್ದಿರುವ ಈ ಟ್ರಂಕ್ ಮನೆಯ ಮರ್ಯಾದೆಯನ್ನು ಕಾಪಾಡಲು ಇರುವ ಏಕೈಕ ಸಾಧನ ! ಪರಂಪರೆಯ ರಕ್ಷಣೆ ತಲೆಮಾರುಗಳ ಹೊಣೆ. ತನ್ನ ವಂಶಜರ ಬಗ್ಗೆ ಪ್ರೀತಿ, ಗೌರವ ಅಭಿಮಾನವಿರಬೇಕಾದ ಅಗತ್ಯತೆಯನ್ನು ಅತ್ಯಂತ ಸೂಕ್ಷ್ಮವಾಗಿ ಹೇಳಿರುವ ಕವಿಯ ಜಾಣ್ಮೆ ಮೆಚ್ಚುವಂಥದ್ದು.

ಇದೇ ರೀತಿ 'ಬವಣೆ ಮತ್ತು ಅವನು', 'ಶೋಧನೆ', 'ಮಾನವರಿಲ್ಲದ ನಾಡಿನಲ್ಲಿ', 'ಮಾರಲಿಟ್ಟ ಕನಸು' ಈ ಕವಿತೆಗಳನ್ನೂ ಸಹ ಹೆಸರಿಸಬಹುದು.

ಕಾವ್ಯ ಸಾಹಿತ್ಯ ರಚನೆಯ ಪ್ರಾರಂಭಿಕ ಹಾದಿ ತುಳಿಯುವುದು ಸುಲಭ. ನಂತರ ಮುಂದಡಿ ಇಟ್ಟು ಖಚಿತ ಗುರಿ ತಲುಪುವುದು ಬಲು ಕಠಿಣ. ಅದಕ್ಕೆ ಅಧ್ಯಯನ, ಪರಿಶ್ರಮ, ಸಾಧನೆ ಬೇಕು. ಕವಿ ಶಾಂತನಾಯ್ಕರು ಅಂತಹ ಸಾಧಕರಾಗಿ ಕಾವ್ಯ ಲೋಕಕ್ಕೆ ನ್ಯಾಯ ಒದಗಿಸುವಂತಾಗಲಿ ಎಂದು ತುಂಬು ಮನದಿಂದ ಹಾರೈಸುತ್ತೇನೆ.

ಬೆಂಗಳೂರು
೧೪-೧೧-೨೦೦೧

ಬಿ. ಟಿ. ಲಲಿತಾನಾಯಕ

ನನ್ನ ಮಾತು

ಅಂತರಂಗದಲ್ಲಿ ಹೆಪ್ಪುಗಟ್ಟಿದ ಜೀವನಾನುಭವದ ತುಣುಕುಗಳು ಸಿಡಿದು ಕಾವ್ಯವಾಗಿವೆ. ಕೆಲವರಂತೆ ಭಾಷೆಯ ಜೊತೆಗ ಓಗ್ಗಾಮುಗ್ಗಾ ಎಳದಾಟ ಮಾಡಿ, ಅಲ್ಲಲ್ಲಿ ಹೆಕ್ಕಿ other make it yours' ಎನ್ನುವ ಜಾಯಮಾನಕ್ಕೆ ಒಗ್ಗಿಕೊಳ್ಳದೆ, ಅನುಭವಗಳ ಆಳವನ್ನ ಸರಳ ಪದಗಳಲ್ಲಿ ಪೋಣಿಸಿರುವೆ. ಕುವೆಂಪು–ಬೇಂದ್ರೆ, ಕಣವಿ, ಶಿವರುದ್ರಪ್ಪನವರ ಕಾವ್ಯದ ರುಚಿ ಇರದಿದ್ದರೂ, ಎಲ್ಲೋ ಒಂದು ಕಡೆ ಕೇಂದ್ರೀಕೃತ ಗೊಂಡಿದ್ದ ಅವಮಾನ, ಅಪಮಾನ, ಮಾನಸಿಕ ಹಿಂಸೆ, ಶೋಷಣೆ, ಸೋಲು, ಜೀವನದ ನೋವು ಒಮ್ಮೆಂದೊಮ್ಮೆಗೆ ಸ್ಫೋಟಗೊಂಡು ಬರೆಯಲು ಪ್ರೇರೇಪಿಸಿದ್ದಂತು ನಿಜ. ಅವರಂತೆ, ಇವರಂತೆ ಅಂತ ಹೇಳಿಕೊಳ್ಳುವುದಿಲ್ಲಾ. ನನ್ನ ಜನರ ಸರಳ ನೋವು, ಆವೇಶ, ಪ್ರತಿನಿತ್ಯದ ಸಂಘರ್ಷ. "ಬರೆ ಗೆಳೆಯಾ ಒರೆ ನನ್ನೊಳಗಿನ ನೋವನ್ನುಂಡು ಸಿನ್ನತನದ ಹಾದಿಯೊಳಗ" ಎನ್ನುವಂತೆ ಬರೆಯುವ ಒಂದು ಸಣ್ಣ ಯತ್ನ. ಇಲ್ಲಿ ಯಾವ ವ್ಯಕ್ತಿ, ಧರ್ಮ, ಜಾತಿಗೆ ನಿಂದಿಸಿಲ್ಲಾ, ಬದಲಾಗಿ ಆ ವ್ಯವಸ್ಥೆ ಯೊಳಗಿನ ದೋಷವನ್ನು ಹೊರಹಾಕಿರುವೆ. ಶತಮಾನಗಳಿಂದ ಜಾತಿ ಎಂಬ ಸಂಕೀರ್ಣ ಪದರದೊಳಗೆ ಸಿಕ್ಕು ನಲಗಿರುವ ನನ್ನ ಜನರು ಅನುಭವಿಸಿರುವ ಅವಮಾನ ಎಂಥಹುದೆಂಬುದು ಜಗತ್ತಿಗೆ ತಿಳಿದದ್ದೆ ಆ ನೋವು ಒಂದು ಕ್ಷಣ ನನ್ನೊಳಗೆ ಇಳಿದು ಬರೆಯುವಂತೆ ಮಾಡಿದೆ.

ಕವಿತೆಗಳನ್ನು ಓದಿ ಸ್ಪಂದಿಸಿದರೆ ಸಾಕು. ನಾನು ಬರೆದುದಕ್ಕೂ ಸಾರ್ಥಕ ವಾಗುವುದು.

ನನ್ನ ಮೊಟ್ಟ ಮೊದಲ ಕವನ ಓದಿ ಬರೆಯುವಂತೆ ಪ್ರೇರೇಪಿಸಿದ ಗುರುಗಳಾದ ಎಂ. ಪಿ. ಎಂ. ಶಾಂತವೀರಯ್ಯನವರಿಗೆ, ಕವನ ಬರೆಯಬಲ್ಲೆ ಎಂಬುದನ್ನು ತೋರಿಸಿ ಕೊಟ್ಟ ಗೆಳೆಯ ರಾಜಶೇಖರ ನಾಯಕಲ್, ಓಂಕಾರ ಕಾಕಡೆ, ಗುರುಗಳಾದ ಪ್ರೊ. ಬಿ. ವಿ. ಗುಂಜೆಟ್ಟಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಪ್ರೊ. ಆರಾಧಿಮಠ, ಒಂದು ಕವನ ಪ್ರಕಟಿಸಿದ ಪ್ರೊ. ಚಂದ್ರಶೇಖರ ಪಾಟೀಲ, ಕವಿಗೋಷ್ಠಿಯೊಂದರ ನಂತರ ಮೌನವಾಗಿ ಕೇಳಿ ನಂತರ ಮನ ತುಂಬಿ ಅಭಿನಂದಿಸಿದ ಡಾ. ಬುದ್ದಣ್ಣ ಹಿಂಗಮಿರೆ ಅವರಿಗೆ, ಬಾಳಸಂಗಾತಿಯಾಗಿ ಬಂದ ನಂತರ ಕಿರಿಕಿರಿ ತಾಳಿಕೊಂಡೇ ಓದುತ್ತಾ ತಿದ್ದಿದ ದಾಕ್ಷಾಯಣಿ, ದೆಹಲಿಯಲ್ಲಿ ಬರೆದ ಕವನಗಳನ್ನು ಓದಿ ಪ್ರೋತ್ಸಾಹಿಸಿದ ಪ್ರೊ. ಸು. ನಾ. ಅಡಿಗರು, ಅನುಪಮಾ ಪಾಲ್ಯಂ, ಕಪಿಲಾ ವಾಯ್. ಆರ್., ಗೆಳೆಯ ಶರದ್, ಸತ್ಯ, ಶಶಿ, ಮಾಲ, ಪದ್ಮಾರಿಗೆ, ಸದಾ ನನ್ನೊಂದಿಗೆ ಸ್ಪಂದಿಸುವ ಗೆಳೆಯ ರಾದ ಹರಪನಹಳ್ಳಿ ನಾಗರಾಜ, ಪರಶುರಾಮ ಪಾಶ್ಚಾಪುರ, ಮಂಜುನಾಥ ಬಂಡ್ರಿ, ಶಿವು ನಾಯಕ, ಡಾ. ವಸಂತಕುಮಾರ, ಡಾ. ಜಗದೀಶ್ ವಿಸಳಾವತ್,

ಸತೀಶಕುಮಾರ ಅರಗಾ, ಶ್ರೀನಾಥ ಜೋಷಿ ಸಿದ್ದಕ್, ಜಿ. ದೇವೇಂದ್ರನಾಯ್ಕ ಜಿ. ಪಿ. ತಾಂಡ, ಅಳಿಯಂದಿರಾದ ಪರಮೇಶ, ವೀರೇಶ, ಮಲ್ಲಿಕಾರ್ಜುನ, ಸ್ನೇಹಿತರಾದ ಪ್ರೊ. ರಾಮಚಂದ್ರನಾಯ್ಕ, ಹೇಮ್ಲಾನಾಯ್ಕ, ವೆಂಕಟೇಶ ಪೂಜಾರ್, ಪ್ರೊ. ವೆಂಕಟೇಶ, ಸುರೇಶ ಕುಲಕರ್ಣಿ, ಶಿಷ್ಯೆಯರಾದ ಶ್ರೀಮತಿ ಅಕ್ಕಮಹಾದೇವಿ ಹಿರೇಮಠ, ವಿಶಾಲಾಕ್ಷಿ ಅಕ್ಕಿ, ಸದಾನಂದ ಧಾರವಾಡ, ಮುಳಕೇರಿ, ವಸಂತ ಹ್ಯಾರಡ್, ಚಂದ್ರಪ್ಪ ಸುಣಗಾರ, ಜೊತೆಗೆ ಬೆಳೆದ ಶಿವಪ್ರಕಾಶ್ ಸಾವಳಗಿ, ರೇವಣಸಿದ್ದಪ್ಪ ಅಂಗಡಿ, ಸದಾ ಬೆಂಬಲಿಸುವ ಅಣ್ಣ ಚಂದ್ರಾನಾಯ್ಕ ಶಿರಗಾನಹಳ್ಳಿ, ಸದಾ ಹುರಿದುಂಬಿಸುವ ಮಾಸ್ಕೇರಿ, ಎಂ. ಕೆ. ನಾಯಕ, ಅಳಗುಂಡಿ ಅಂದಾನಯ್ಯ, ಪ್ರಾಚಾರ್ಯ ಎಂ.ಎಸ್. ಲಮಾಣಿ, ಜಯಂತ ಕಾಯ್ಕಿಣಿ, ಮೋಹನ ನಾಗಮ್ಮನವರ, ಡಾ. ಆರ್. ವಿ. ಭಂಡಾರಿ, ಮುನ್ನುಡಿ ಬರೆದ ಶ್ರೀಮತಿ ಬಿ. ಟಿ. ಲಲಿತಾನಾಯಕ, ಡಾ. ಕಾಳೇಗೌಡ ನಾಗವಾರ, ಗಂಗಾಧರ ಹಿರೇಗುತ್ತಿ, ಸರ್ಜೂ ಕಾಟ್ಕರ್, ಡಾ. ಸಿದ್ದನಗೌಡ ಪಾಟೀಲ, ಶ್ರೀ ರಸಾಳ್ಕರ, ಶ್ರೀ ಟಿ. ಎಸ್. ಯರಗಟ್ಟಿ, ಬಸು ಸೂಳಿಬಾವಿ, ಡಾ. ಕೆ. ಆರ್. ದುರ್ಗಾದಾಸ್, ಶ್ರೀ ಅಶೋಕ ಪವಾರ, ಡಾ. ಎಂ. ಮುರಿಗೆಪ್ಪ, ತೇಜಸ್ವಿನಿ ಕಟ್ಟಿಮನಿ, ತಿದ್ದಿದ ಗೆಳೆಯ ಡಾ. ಅರ್ಜುನ್ ಗೊಳಸಂಗಿ, ಬೆನ್ನುಡಿ ಬರೆದ ಹಿರಿಯಣ್ಣ ಮೋಹನ ಕುರಡಗಿ, ಲಂಗೋಟಿ ಗೆಳೆಯ ಹನ್ಮಂತನಾಯಕ, ರಾಜು ಮಸವಳ್ಳಿ, ಚೌಗಲೆ ರಾಜು, ಸಂತೋಷ ಕಾಂಬಳೆ, ಬೆಂಗಳೂರಿನ ಕೃಷ್ಣನಾಯ್ಕ, ಕೆ. ಶಿವರಾಂ, ಪುಸ್ತಕ ಮುದ್ರಿಸಿದ ಎಂ. ಎನ್. ಕಾಂಬಳೆಯವರಿಗೆ, ಮುಖಪುಟಕ್ಕೆ ಚಿತ್ರ ಬರೆದ ಹಿರಿಯ ಸ್ನೇಹಿತ ಎ. ಆರ್. ಸುರೇಶ್ ಅವರಿಗೂ ಹಾಗೂ ನನ್ನೆಲ್ಲಾ ಹಿತೈಷಿಗಳಿಗೂ ನೆನೆಯುತ್ತೇನೆ.

ಶಾಂತನಾಯ್ಕ ಶಿರಗಾನಹಳ್ಳಿ

ಪರಿವಿಡಿ

ಹೆಜ್ಜೆಗಳು / ೧
ರಾಡಿ ನೀರು ಮತ್ತು ಕಾಗೆ / ೨
ಅಂತೂ ಪದ್ಯ ಬರೆದ ನಮ್ಮ ಕವಿಗೆ / ೪
ಆತ್ಮಗಳು / ೫
ಈ ಮಹಾನಗರದ ಮೂಲೆಯಲ್ಲಿ / ೬
ದ್ವಂದ್ವ / ೮
ನಾನೊಬ್ಬನೆ / ೯
ಕೋರಿಕೆ / ೧೦
ಮಾರಲಿಟ್ಟ ಕನಸು / ೧೧
ನಗು....? / ೧೨
ಮಾಳಿ / ೧೩
ಮಾನವರಿಲ್ಲದ ನಾಡಿನಲ್ಲಿ / ೧೪
ಬೆಳಕಾಗಿ ಬಾ ಬೆಳದಿಂಗಳೆ / ೧೬
ಧನಿಕತೆ / ೧೭
ದಿನಕ್ಕೊಬ್ಬ ದೇವರು / ೧೮
ಶೋಧನೆ / ೨೦
ವರ್ಡ್ಸ್‌ವರ್ತ್‌ನೊಂದಿಗೊಂದು ದಿನ / ೨೨
ಇಲ್ಲಿ....? / ೨೩
ಹೀಗೆ / ೨೪
ನಾನು / ೨೫
ಅಸ್ತಿತ್ವ / ೨೬
ಬವಣೆ ಮತ್ತು ಅವನು / ೨೭
ಅಶೋಕನ ಶೋಕ / ೨೮
ನೆನಪುಗಳ ಸುತ್ತ / ೨೯
ಕೋಗಿಲೆ ನೀನೇಕೆ ಹಾಡುವುದಿಲ್ಲ ? / ೩೦
ನಾವು ಹೀಗೆ / ೩೨
ವಾಸ್ತವಿಕತೆ / ೩೩
ಭಾವಗೀತೆ / ೩೪
ಎಂಟಾಣೆ ಮತ್ತು ಜೋಗತಿ / ೩೫
ಕಾರವಾರ / ೩೬
ತಳಮಳದ ಕ್ಷಣಗಳು / ೩೭
ನಾಗರಿಕ / ೩೯
ಗೊಂದಲ / ೪೧
ಕ.ವಿ.ವಿ. ಗ್ರಂಥಾಲಯದಲ್ಲೊಂದು ಸಲ / ೪೨
ವಿನ್ಸ್ಲೆಟ್‌ಗಳಿಗೆ / ೪೪
ಮಾತಿನ ಜಾಡಿಗುಂಟ / ೪೫
ನಮ್ಮೂರಲಿ ಬದುಕಿರಬಹುದಾದವರು / ೪೭
ಕಪ್ಪು ಹೃದಯದ ಬಿಳಿ ಹುಡುಗಿಯರು / ೪೮
ಅಪ್ಪ ಕಲಿಸಿದ ಹಾಡು / ೪೯
ಮೀನು ಮತ್ತು ಹುಡುಗಿ / ೫೦
ಪಾಲು ಮತ್ತು ಮುದುಕ / ೫೧
ಸ್ಥಿತಿ ನೆಲೆ ಹಾದಿ / ೫೩
ನನ್ನೊಳಗಿನ ಅವಳ ಪದ್ಯ / ೫೫
ಚಂದ್ರನ ಮ್ಯಾಲೆ strike / ೫೭
ಟ್ರೆಂಕ್ ಮತ್ತು ಇತಿಹಾಸ / ೫೮
ಸಮಾನತೆ ಮತ್ತೊಂದಿಷ್ಟು / ೬೦
ಚೆಲುವೆಯರಿಗೆ / ೬೨
ಅರ್ಥಸಚಿವನ ಅನರ್ಥ ರೇಖೆಗಳು / ೬೩
ಹುಟ್ಟಿನಾಪರಿ / ೬೫
ಜಾತಿ ಮತ್ತು ಅವಳು / ೬೭
ದೇವರು / ೬೮
ದಲಿತ / ೬೯
ಜಗದಿ ಉಳಿದಿಹುದಾದರೇನು ? / ೭೦
ಹೆಂಗಸು ಮತ್ತೊಂದಿಷ್ಟು / ೭೧
ಹೂ ಮತ್ತು ನಾನು / ೭೩
ಒಂದು ಸತ್ತ ಕಾಗೆ ಸುತ್ತ / ೭೪
ಒಂದು ಜೀವ ಮತ್ತು ನಿದ್ದೆ / ೭೫
ಬಾಬಾಸಾಹೇಬ್ ಮತ್ತು ನಾವು / ೭೬
Fashion / ೭೭
ಬ್ಯೂಟಿ ಪಾರ್ಲರ್ / ೭೮
Lipstick / ೭೯
ವ್ಹೈಕ್ ನುಂಗುವ ಮಹಿಳೆ ಮತ್ತು ನೈಜತೆ/೮೦

ಹೆಜ್ಜೆಗಳು

ಅಜ್ಜನ ನೆತ್ತಿಯ ಮೇಲೆ ರಾಜನೊತ್ತಿದ್ದ
ಗುಲಾಮಿ ಹೆಜ್ಜೆಗಳ

ನೂಪುರಗಳಾಗಿದ್ದ ಅಜ್ಜ
ಮಹಾರಾಣಿಯ ಮೃದುಪಾದಗಳಿಗೆ
ರಾಜನ ಸಿಂಹಾಸನದಡಿಯಲ್ಲಿ
ಅಜ್ಜನ ಕನಸುಗಳು ಹೂತು ಹೋಗಿದ್ದವು.

ಅಪ್ಪನ ಹೆಗಲ ಮೇಲೆಲ್ಲಾ
ಬ್ರಿಟೀಷರ ಕೆಂಪು ಕೆಂಪಾದ
ಬೂಟಿನ ಗುರುತು

ಸಾಲ ಮರಗಳಿಗೆ ನೇತು ಬಿದ್ದ ಹೆಣಗಳು
ಅಪ್ಪನ ಸಾವಿನ ಪ್ರತೀಕಗಳು

ನನ್ನ ಸ್ವತಂತ್ರಗೊಳಿಸಲು ಅಪ್ಪ
ಬ್ರಿಟೀಷರಿಗೆ ಬೆನ್ನುಕೊಟ್ಟಿದ್ದ
ಇರಿದಿರಿದು ಹರಿದು ಹಂಚಿದರು ದೇಶ
ಹೌದಪ್ಪಗಳಿಗೆ....

ಅಪ್ಪಗೆ ತಿಳಿದಿರಲಿಲ್ಲಾ
ನನಗೆ ಸ್ವತಂತ್ರವೇ ಇಲ್ಲವೆಂದು

ಹೆಜ್ಜೆಗಳು ಬೆಳೆಯುತ್ತಲೇ ಇವೆ
ಮುಗಿಲೆತ್ತರಕೆ

ನನ್ನ ಕುಬ್ಜಗೊಳಿಸಿ
ದೈತ್ಯ ರೂಪವತಾಳಿ....

* * *

ರಾಡಿನೀರು ಮತ್ತು ಕಾಗೆ

ಹುಬ್ಬಿ-ಧಾರ್ವಾಡ ಮಾ ನಗರ ಪಾಲಿಕೆ
ನೀರು ಸರಬರಾಜು ಇಲಾಖೆ ಮುಂದೆ
ಸಣ್ಣದೊಂದು ಗುಂಡಿ, ಗುಂಡಿ ತುಂಬಾ ನೀರು
ರಾಡಿ ನೀರೊಳಗೆ ಕತ್ತು ಬಳಕಿಸಿ ನಡೆಸಿತ್ತು ಕಸರತ್ತು.

ಇತ್ತ ಮುಂಜಾವೂ ಅಲ್ಲ
ಅತ್ತ ಸಂಜೆಯೂ ಅಲ್ಲದ ಹೊತ್ತಲ್ಲಿ
ಭರ್ಜರಿ ಸ್ನಾನ ಗೈಯುತ್ತಿತ್ತೊಂದು ಕಾಗೆ
ರೀತಿ ನೋಡಿದರೆ ತಿಕ್ಕಿ ತಿಕ್ಕಿ ತೊಳೆದುಕೊಳ್ಳುತ್ತಿತ್ತೇನೋ

ಗಂಗಾ, ತುಂಗಾ, ಕಾವೇರಿಗಳೆಲ್ಲ
ಮನವೇರಿ ಬಂದವು
ಅರೆಬರೆ ನಗ್ನದೇಹ ಪ್ರದರ್ಶಿಸುತ್ತಾ
ಕಾಮಭಾವ ಅದುಮಿ ದೇವಭಾವ ಉಕ್ಕಿಸುತ್ತಾ

ಒಪತಪಾದಿಗಳ ಗೈಯುವಂ ಜನಕ್ಕೂ
ಕಾಕಮಜ್ಜನಕ್ಕೂ ತಾಳೆ ಹಾಕಿದ್ದೆ
ಆತ್ಮಶುದ್ಧಿಯೋ, ಪಾಪ ಹಾರಿಯೋ
ಛೇ....ಛೇ....ಹಾಗೇನೂ ಇಲ್ಲಾ ಬಿಡಿ,

ಷೇರು ಹಗರಣದಲ್ಲಿಲ್ಲಾ
ಬಾಂಬೂ, ಬಂದೂಕುಗಳಂತು ಗೊತ್ತೇ ಇಲ್ಲಾ
ವರದಕ್ಷಿಣೆ....ಕೊಲೆ ಪಾಪ ಬಿಡಿ
ಮತ್ತೇಕೆ ಸ್ವಾಮಿ ಸ್ನಾನ........

ನೀವು ನಿತ್ಯಸ್ನಾನ ಮಾಡಿ
ಮಾಡಿದ ಕರ್ಮಗಳಿಂದ ಶುದ್ಧರಾಗುತ್ತೀರಿ
ಹುರುಪಿಗೋ ಹುಮ್ಮಸ್ಸಿಗೆ,
ರೆಕ್ಕೆ ತೋಯಿಸಿ ತನ್ನ ಲೋಕದಲ್ಲಿ ತಾನಿತ್ತು.

ಆದಕ್ಕೂ ತಿಳಿದಿದೆ ಗಂಗೆ-ತುಂಗೆಗಳೆಲ್ಲಾ
ರಾಡಿಗಿಂತ ರಾಡಿಯೆಂದು
ತನ್ನ ಪರಿಶುದ್ಧ ಮನಸ ಹೊತ್ತು
ರಾಡಿ ನೀರಲ್ಲೂ ಸ್ನಾನಗೈದರೇನಾಗದೆಂದು ಬಗೆದಿದೆ

* * *

ಅಂತೂ ಪದ್ಯ ಬರೆದ ನಮ್ಮ ಕವಿಗೆ

ನಿಮ್ಮ ಕವನಗಳಲ್ಲಿ ಒಂದಿಷ್ಟೋ
ಅಂತಃಸತ್ವವೇ ಇರುವುದಿಲ್ಲಾ
ಸತ್ತ ಭಾವನೆಗಳ ಸುತ್ತಲೂ ಹೆಣೆದ
ಪೊಳ್ಳು ಪದ ಪುಂಜಗಳು.

ನಿಮ್ಮ ಕವನಗಳಲ್ಲಿ ಜೀವಂತಿಕೆಯು
ಜಾಡ ತಪ್ಪಿ, ಜರಿದು ಹೋಗುತ್ತದೆ
ವಾಸ್ತವವನು ಹುಡುಕಾಡುತ್ತೇನೆ
ನಿಮ್ಮ ಶಬ್ದಾಲಂಕಾರಗಳಲ್ಲಿ.

ಓ ಕವಿ ಮಹಾಶಯರೆ
ಸಿಕ್ಕ ಸಿಕ್ಕ ಶಬ್ದಗಳನ್ನು
ಹೆಕ್ಕಿ ಹೆಕ್ಕಿ ಸಿಕ್ಕಿಸಿದರೆ ಸಾಲದು ಪದ್ಯಕೆ
ಕೊಂದುಕೊಳ್ಳಿ ನಿಮ್ಮ ನೀವು

ಅಂದಾಗ ಬಂದೀತೊಂದು ಕವನ
ಓದುಗನೆದೆಗೆ ನೇರವಾಗಿ ತೂರಿ
ಹೌದು ಇದು ನನವೇ ಬದುಕು
ನನ್ನಂತರಂಗ ಅವನಿಗೆ ತಿಳಿದಿದ್ದಾದರೂ ಹೇಗೆ ?

ಆದೀತು ಅದು ನಿಮ್ಮ ಕವನ
ಕೈಗೆಟಕದ ಶಬ್ದ
ತಿಳಿಗೇಡಿ ಭಾಷೆಯಲಿ
ಬರೆ ಬರೆದು ಬಹುಮಾನವೇನೋ ಪಡೆದೀರಿ

ಯಾವ ಪಾಮರನಿಗೆ ಪ್ರಯೋಜನವಾಯ್ತು ಹೇಳಿ
ಮನ್ನೆ ಸಿಕ್ಕ............ಪೀಠ
.........ಂಪ.... ...ಬರೀ ಪ್ರಶಸ್ತಿಗಳೇ ?
ಅಂದರೆ, ನೀವೂ.........ಮಹಾನ್ ಕವಿಗಳೇ ಬಿಡಿ.

* * *

ಆತ್ಮಗಳು

ಬಿಸಿಲು ಗುದುರೆ ಬೆನ್ನೇರಿ
ಬದುಕನ್ನ ಹಿಡಿಯಲು ಹಠತೊಟ್ಟ
ಹಸಿದು ಸ್ಮಶಾನ ಸೇರಿದ ಅಜ್ಜ.

ನೆತ್ತಿ ಉರಿಯುವಂತೆ ಹೊರೆಹೊತ್ತು
ಕನಸು ಕಾಣುವಾಗೆಲ್ಲಾ
ಉರಿವ ನೆತ್ತಿಯೇ ಕುತ್ತಾದಂತಾಗಿ ಬಿಕ್ಕಳಿಸಿದ ಅಜ್ಜಿ

ತೆರೆದ ಮೈಯಿಂದ ಸೂರ್ಯನ ಕೆಂಗಿರಣಗಳಿಗೆ ಬಲಿಯಾದ
ಅಪ್ಪ ಕರುಕಲಾದ ಕರಿಮೈ
ಅಂಗಿಕಾಣದೇ ಹೆಣವಾದ ಅತೃಪ್ತ ಆತ್ಮಗಳು.

* * *

ಈ ಮಹಾನಗರದ ಮೂಲೆಯಲ್ಲಿ

ಈ ಮಹಾನಗರದ ಮೂಲೆಯಲ್ಲಿ
ಮನಸುಗಳು ಮಾತನಾಡುತ್ತವೆ
ಮೌನ ಮುರಿದು
ಕ್ರಿಕೇಟಿಗರ ಗುಂಪು
ಸಂತೆಯಲ್ಲೂ ಚಿಂತಿತ ಜನ
ಕಾಂಕ್ರೀಟ್ ಕಾಡಿನಲ್ಲೂ
ಕಾಣದ ಕೋಗಿಲೆಯೊಂದು ಕಿಚಗುಡುತ್ತದೆ.
ಕಿವಿಗಿವುಡಿಕ್ಕುವ ಸದ್ದಿನಲ್ಲೂ
ಇಂಪಡರುವಂತೆ.

ಹಸಿವಿಗಾಗಿ ಹಾದರದ ಹಾದಿ ಹಿಡಿದವಳು
ಏಡ್ಸ್ ಹರಡುವ ತಾಣವಾಗಿದ್ದಾಳೆ
ಒಂದು ಕಾಲದ ಹಳ್ಳಿ ಹಳ್ಳಿಗಳೆಲ್ಲಾ
ಕಳೆದು ಹೋದಂತೆ
ಕುಳಿತಿದ್ದಾರಲ್ಲಿ ಕೊಳಚೆ ಜೀವಿಗಳು

ಕೋಟು ಬೂಟಿನ ಕಚೇರಿ ಮುಂದಿ
ಕಿಸೆ ತುಂಬಿಕೊಳ್ಳುತ್ತಾರೆ
ಬಡವರ ಉಸಿರನ್ನ
ಬಾಚಿಕೊಳ್ಳುತ್ತಾರೆ ಬೆವರ ಪಾಲನ್ನ
ಕೆಲವರಿಗೆ ಮೋಜಾದರೆ ಕೆಲವರಿಗೆ ನರಕ

ಕಳೆದುಕೊಳ್ಳುತ್ತಾರಿಲ್ಲಿ ಎಲ್ಲವನು
ಯಾರಿಗೂ ಯಾರಿಲ್ಲ
ಯಾಂತ್ರಿಕತೆಯಂತ್ರ
ಬೆನ್ನುಬಿಡದ ಭೂತ ಸ್ಪರ್ಧೆ

ಮುಂಜಾನೆ–ಸಂಜೆ ನಡುರಾತ್ರಿ ಒಂದೇ
ಓಡುವುದು ಕಾಲನ ಹಿಂದೆ
ಬಸ್ಸು, ರೈಲು, ಟ್ಯಾಕ್ಸಿ, ಜೀಪು
ಬುಳು ಬುಳು ಹುಳುಗಳಂತೆ ಮಂದಿಗಳದ್ದೆ
ಮಹಾಸಾಗರ

ಶೀಲವಿಲ್ಲದವರು ಸಾಲಕೋರರು
ಕೊಲೆಗಾರರು ಕಳ್ಳಖದೀಮರು
ಯೋಜನೆ ಹಾಕುತ್ತಾರೆ
ರದ್ದಿ ಆರಿಸುವ ಹುಡುಗ
ಕೆದರುತ್ತಾನೆ ಹೊಲಸು

ಮಹಾನಗರದ ಮೂಲೆಯಲ್ಲಿ
ತಣ್ಣಗೆ ಎಲ್ಲವು ನಡೆಯುತ್ತವೆ
ಹಗಲು–ರಾತ್ರಿ
ದಿಕ್ಕು ದಸೆಗಳಿಲ್ಲದೆ
ದಕ್ಕಿದವನದೆ ದೊಡ್ಡ ಪಾಲು
ದಕ್ಕದವನು ಮುಕ್ಕುತ್ತಾನೆ ಮಣ್ಣು

* * *

ದ್ವಂದ್ವ

ಕುಂತಿ ಕರ್ಣರೊಡಲೊಳಗೆ
ಎಡಬಿಡದೇ ಕಾಡಿತ್ತು.
ಅಶ್ವಥಾಮನನ್ನು ಕೊನೆಗೂ ಬಿಡಲೇ ಇಲ್ಲಾ
ವೈಶಂಪಾಯನ ಸರೋವರದಲಿ ಬೆವರಿ
ಬಸವಳಿದ ದುರ್ಯೋಧನ
ರಾಮನ ಅರಮನೆಯಲ್ಲಿ
ಎಲ್ಲರಂತರಂಗ ಹೊಕ್ಕೀತಿ ದ್ವಂದ್ವ
ಮನ್ನೆ ಪೊಕ್ರಾನ್‌ನಲ್ಲಿ ಸಿಡಿಸಿದ ಬಾಂಬ್
ಹೃದಯವಂತ ಜೀವಿಗಳಿಗೆ
ನಿದ್ದೆ ಬಾರದಂತೆ ಕಾಡಿತ್ತು.
ಮಡಿಯುಟ್ಟು ಮುಡಿಗೆ ಹೂವಿರಿಸಿ
ಶೃಂಗರಿಪ ಗೃಹಿಣಿಗೆ
ಗಾಂಧಾರಿಯು ಕುರುಡು ನಾಟಕದ
ಕಪ್ಪು ಪಟ್ಟಿಯಲ್ಲಿತ್ತು ದ್ವಂದ್ವ
ಕುಡಿದ ಮತ್ತಿನಲಿ ಅವಳೊಂದಿಗಾಡಿದ ಮಾತು
ಹಗಲ ಬೆಳಕಿನಂತೆ ನಷೆ ಇಳಿದಾಗ
ದ್ವಂದ್ವವಾಗೆ ಕಾಡಿದ್ದವು
ಬಿಟ್ಟರೂ ಬಿಡದ ಮಾಯೆಯಂತೆ
ದ್ವಂದ್ವ,
ಬದುಕ ಭರವಸೆ ಹುಸಿಗೊಳಿಸಿ
ಹಾರಾಡುತ್ತಿದೆ ಸುತ್ತಮುತ್ತ
ಹಿಡಿದರೂ ಕೈಗೆ ಸಿಗದಂತೆ.

* * *

ನಾನೊಬ್ಬನೆ

ನಾನೊಬ್ಬನೆ ನನ್ನ ಸುತ್ತ ಸುಳ್ಳು
ನಗುವಿನ ನಾಟಕ
ಅಳುವಿನ ಮೋಜು ಗೋಜು
ಬುಟಾಟಿಕೆ ಬಲೆಗಳು

ಒಬ್ಬನೇ ಕುಳಿತು
ನಿಸರ್ಗದ ಸವಿ ಸವಿಯುತ
ಮುಖವೆತ್ತಿ ಆಗಸದ ಕುಂಗಿಗೆ
ಕಿವಿಗೊಟ್ಟಾಗ ನಿಜವಾಗಿಯೂ ನಾನೊಬ್ಬನೇ

ನಾ ಅತ್ತಾಗ ನನಂತರಂಗ
ನಾ ನಕ್ಕಾಗ ಹೃದಯುದ ಕಂಪನ
ಇವೆರಡು ಬಿಟ್ರೆ
ನಾ ನಿಜವಾಗಿಯೂ ಒಬ್ಬನೇ

ಭಾವನೆಗಳಿಗೆ ಬಂಧಿಯಾಗಬಹುದು ನೀವು
ಮಾತುಗಳಲ್ಲಿ ಮೋಡಿಮಾಡಬಹುದು
ಮತ್ತೆ ಯೋಚಿಸಿದಾಗ
ಇದ್ದಲ್ಲೇ ಇದ್ದೆ ನಾನೊಬ್ಬನೆ

ಹೊರೆಹೊತ್ತಾಗ ಬರಿಕನಸು
ಇಳುಹಿದಾಗ ಬರಿಮನಸು
ಜೀವದ ಜಂಜಡ ತೊರೆದಾಗ
ಮಣ್ಣಿನಲಿ....ನಾ ಒಬ್ಬನೆ

* * *

ಕೋರಿಕೆ

ನೀರೆರದ ನೀರಿನ ಪ್ರತೀಕವಾಗಿ
ಅಂಗಳದಲಿ ಅರಳಿ ಗಾಳಿಗೆ ತಲೆದೂಗುವ
ಕೆಂಗುಲಾಬಿಯಾಗಿ ನಿಮ್ಮ ಮನಕೆ ಮುದ ನೀಡುವ ಹೂ
ನಾನಾಗಬೇಕು. ನನ್ನ ಅಹಂ, ತೊರೆದು
ಹೆಚ್ಚೆಂದು ಕುಣಿಯುವ ಹುಚ್ಚು ಆಶೆಗಳ ಕಳಚಿ
ವಿನಯಶೀಲನಾಗಿ ನಿಂತು ನಿಮ್ಮನಾಕರ್ಷಿಸುವ
ಬಾಗಿಲ ಬಳಿಯ ಆಳೆತ್ತರ ಯೋಧನ ಕಂಚಿನ ಪ್ರತಿಮೆ
ಆಗಬೇಕು ಸ್ವಾರ್ಥಬಿಟ್ಟು ಪರಮಾರ್ಥಾಪೇಕ್ಷಿಯಾದಂತೆ
ಕೊಟ್ಟ ಕೂಳಿಗೆ ಬಾಲ ಆಡಿಸಿ ಋಣತೀರಿಸು ಶ್ವಾನರಾಯನ
ಹೋಲುವ ಬುದ್ಧಿ ಹೊಂದಿರಬೇಕು.
ಹೊಲಸು ರಾಜಕೀಯ ಬುದ್ಧಿಯನ್ನು ತೊರೆದು
ನಿಮ್ಮ ಕಾಲಡಿ ತುಳಿಸಿಕೊಂಡು ಕ್ಷಣ ಮುದುಡಿ
ಮೇಲೇಳೊ ಹುಲ್ಲು ಗರಿಕೆಯಾಗಬೇಕು.
ಮತ್ತೊಬ್ಬರ ಎದೆಯ ಮೇಲೆ ಕಾಲಿಟ್ಟು ಮೇಲೇರುವುದಕ್ಕಿಂತ
ವೈರಿಯ ಪ್ರೀತಿಸುವ ಮನಬೇಕು
ಸಕಲ ಜೀವಿಯ ಜತೆಗೂಡಿ ಬದುಕಬೇಕು.
ಮೇಲೆಂಬ ಮನುಷ್ಯ ಹೀನ ಬುದ್ಧಿ ಬಿಟ್ಟು
ಪ್ರಾಣಿಸಂಕುಲದ ಸಹವಾಸದಲಿ ಬದುಕಬೇಕೆಂಬ ಆಶೆ.

* * *

ಮಾರಲಿಟ್ಟ ಕನಸು

ನಿದ್ದೆಯಿಂದೆದ್ದಾಗ ಮುದುಡಿಬಿದ್ದ ಮಂದಾರದ ಹಾಗೆ
ಹೃದಯದ ಸುತ್ತಲು ಸುತ್ತು ಬಿದ್ದ
ಕನಸುಗಳ ಆರಿಸುತ್ತೇನೆ.

ಮರೆತು ಹೋದವು ಹಲವು
ಮೂಕಜ್ಜಿ ಕನಸುಗಳು
ಮರೆಯದೆ ಕಾಡುವವು
ಮನಮುಸಣದ ಹೆಣಗಳು

ಮಾರಲು ಇಟ್ಟಿದ್ದೇನೆ ಕನಸು
ಬುಟ್ಟಿಯಿಂದೊಂದು ಕಳುವಾಗಿದೆ
ಹುಡುಕುತ್ತಿದ್ದೇನೆ ನಿರಂತರ
ಸಿಕ್ಕೀತೆ ಸಿಕ್ಕರೂ....ದಕ್ಕೀತೇ.

ದರಿಯಾ ದೌಲತ್ ದಾರಿಯಲಿ
ದರಿದ್ರನಾಗಿ ಓಡಾಡಿ
ದರಿಯಾದ ದೊರೆಯಾಗೋ
ಅವಕಾಶ ಸಿಕ್ಕೀತೆ ಸಿಕ್ಕರೂ ದಕ್ಕೀತೆ.

ನನ ಕನಸುಗಳಲ್ಲೊಂದು ಕೊಡಲೇ
ಕೊಡಲೇ ನಿಮಗೊಂದು....
ಕಣ್ಣು ರೆಪ್ಪೆಗಳಡಿಯಲಿ ಮುಚ್ಚಿಟ್ಟು
ಮುರಿದು ಬಿದ್ದ ಕನಸ ಮಹಲನು ಕಟ್ಟಿಕೊಡುವಿರಾ ?

* * *

ನಗು....?

ಯಾರದೀ ನಗು
ಸೋತ ಪಾಂಡವರದೋ
ಗೆದ್ದ ಸುಯೋಧನ ಘರ್ಜಿಸಿದ ಅಟ್ಟಹಾಸದ್ದು
ಜಡೆ ಮುಡಿಯು ಬಿಚ್ಚಿ ಶಪಥಂ ಗೈದ ಪಾಂಚಾಲಿ
ಕಪಟನಾಟಕ ಸೂತ್ರಧಾರಿ ಗೊಲ್ಲನದೋ
ನಕ್ಕವರ ಎದೆ ಹೊಕ್ಕವರಾರು
ಜ್ವಾಲಾಮುಖಿಯನ್ನಡಗಿಸಿಟ್ಟ
ಪ್ರಶಾಂತ ಚಿತ್ತ ಹಸನ್ಮುಖಿ ಬುದ್ಧ
ಅಂಗೂಲಿಮಾಲನ ಕಂಡು ವಿಚಲಿತನಾಗಲಿಲ್ಲ
ಹರಿದಂಗಿಯು ಕಂಡು ಬಾಡಿದ ವದನ ಕಂಡು
ಉಡಾಫೆ ಮಾಡುವ ಉಳ್ಳವರು,
ಹರಿದ ಬಟ್ಟೆಯಲ್ಲಿ ಕಾಣುವ ಹೆಂಗಳೆಯರ ಮೈಕಂಡು
ಪುಳಕಿತಗೊಂಡವರು ನಕ್ಕು
ಘಾಸಿಗೊಳಿಸಿದರವಳ
ನಕ್ಕ ಸುಯೋಧನ ಅತ್ತ ಕೊನೆಗೆ
ಉಳ್ಳವರೆಂದು ಅರಿತಾರಿ ಮರ್ಮವ.

* * *

ಮಾಳಿ

ಹೋಗುವಾಗೆಡಕ್ಕೆ ಬರುವಾಗ ಬಲಕ್ಕೆ ಬರುವ
ಆಳ ಮೇಲೆ ಮಾರೆತ್ತರದ ಮಣ್ಣಿನ ದಿಬ್ಬ
ಸುತ್ತ ಕಾಡಿದ್ದಿರಬಹುದು. ಕಿರುಬನಕಟ್ಟೆ
ದನಕಾಯುವಾಗ ಇದ್ದ ತಾಳೆ ಗಿಡಗಳ ಗುಂಪು
ಅವ್ವ ಹೇಳಿದ ಕತ್ತೆ ಕಿರುಬಗೆಳ ಕಥೆ.
ಗುಡಸಲ ಮುಂದೆ ಕುಂತಾಗ ದೀಪ ತೋರಿಸಿ
ಚೌಡಿಯ ದೇವರು ಅಲ್ಲಿಂದಿಲ್ಲಿಗೆ ಕಳಿಸಿತು.
ಒತ್ತರಿಸಿ ಬಂದಿದ್ದ ಒಂದನ್ನು ನಿಲ್ಲಿಸಿದ್ದು ನೆಪ್ಪು.

ಮಾಳಿ ಸುತ್ತೆಲ್ಲಾ ಸೌಳು ಮಣ್ಣು
ಕೆಸರರಾಡಿಯೊಳಗೆ ಸಿಕ್ಕ ಬಾರದ ಮಣಕ
ಮಳೆ ಬಂದಾಗ ಮಾಳಿ ಹತ್ತಿದ ದನಕಾಯುವ ಹುಡುಗರ ಹಿಂಡು
ಹೆಣ ಸುಡುವಾಗ ಅಲ್ಲಿಂದಲೆ ಇಣುಕುತ್ತಿದ್ದರು.
ಯಾವ ಇತಿಹಾಸವಿಲ್ಲದೇ,
ನಮ್ಮೂರ ಹುಡುಗರ ಬಾಯಿಯೊಳಗೆ ಮಾಳಿ
ಜನಜನಿತವಾಗಿದೆ,

ಹಿಂದೆಯೂ ದೊಡ್ಡ ಗುಡ್ಡವಿರಬಹುದೇ ?
ಎಷ್ಟೋ ಜನರು ನಿರುತ್ತರರಾದರು
ಈಚಲು ತಾಳೆ, ಬೇವಿನ ಮರಗಳ ತಾಣ
ಕೆರೆ ಬತ್ತಿ ಬೋಳಾದಂತೆ ಮರಗಳೆಲ್ಲಾ ಮಾಯ
ಉಳಿದಿರುವುದೊಂದೆ ಮಣ್ಣಿನ ದಿನ್ನಿ.

* * *

ಮಾನವರಿಲ್ಲದ ನಾಡಿನಲ್ಲಿ

ಮಾನವರಿಲ್ಲದ ನಾಡಿನಲ್ಲಿ
ಮನಸುಗಳಿಗೆ ಅರ್ಥವೇ ಇಲ್ಲ
ರಕ್ತ ಬೀಜಾಸುರನ ಸಂತಾನದಲ್ಲಿ
ಸಮಾನತೆ ಹುಡುಕ ಹೊರಟರಲ್ಲಾ

ಕಂಬಾಲಪಲ್ಲಿಯಲಿ
ನಂಜುಕಾರುವ ಹಗಲು, ನರಕವಾಯ್ತು ಇರುಳು
ಸಾವು ನೆತ್ತಿಯ ಮೇಲೆ ತೂಗು ಕತ್ತಿ
ಕೊನೆಗೂ ಜೀವಿಗಳು ಜೀವಂತವಾಗಿಯೇ ಬೆಂದು ಹೋದವೇ ?

ಹೌದು ಗೆಳೆಯ ತಪಗೈದ ಶೂದ್ರ ತಪಸ್ವಿಯ ಕೊಂದು
ಇತಿಹಾಸ ಮಾಡಿದವರುಂಟಿಲ್ಲಿ
ವಿದ್ಯೆ ಕೊಡದೆ ಹೆಬ್ಬೆರಳು ಕೇಳಿದವರು
ಭೂತ ವರ್ತಮಾನದಲಿ ನೂರ್ಮಡಿಸುತಿಹರು

ಮನಬಿಚ್ಚುವ ಮುನ್ನ ಕನಸ ಕೊಂದವರದೆ
ಉಮ್ಮಳಿಸಿದ ದುಃಖ ತಡಕೊಂಡು
ಬಿಕ್ಕುತಿಹಳಿಲ್ಲಿ ಬಾಲೆ ಗುಡಿಸಲಲ್ಲಿ

ಸಹಿಸದಷ್ಟು ಪೆಟ್ಟು ಬೆನ್ನಮೇಲೆ
ಕ್ಷಣ ಕ್ಷಣವೂ ಅವಮಾನದ ಕಟು ಟೀಕೆಗಳು
ಮಾನವರಿದ್ದಾರೆಯೇ ? ಬುದ್ಧ ಬಸವ ಗಾಂಧಿ
ಅಂಬೇಡ್ಕರರಂಥವರು
ಹಸಿದೊಡಲ ತಣಿಸಿ ದಲಿತರ ಚಿತೆ ನಂದಿಸುವವರು
ಅಂತರಾಳದ ಅಸಹಾಯಕತೆ
ಕಿಡಿಕಾರುವ ಕೆಂಪು ಸೂರ್ಯನಂತೆ
ಹೊತ್ತುಕೊಂಡು ಉರಿಯುತ್ತಿದೆ ಕತ್ತಲನ್ನು ಲೆಕ್ಕಿಸದೆ
ಸ್ಫೋಟಗೊಂಡರೆ ಬದುಕಿ ಉಳಿಯುವುದೆ ವ್ಯವಸ್ಥೆ

ಹೊಣೆ ಯಾರದು ಅದಕೆ
ಒದೆಯುವವರ ಕಾಲ್ಚೆಂಡಾದ ನಾವೋ
ಬರಿ ಒದೆಯುತ್ತಲೇ ಬಂದ ನೀವು
ಕಾಲನೊಬ್ಬನಿಗೆ ಗೊತ್ತು ಕಾಕತಾಳಿಯುತ್ತರ.

* * *

ಬೆಳಕಾಗಿ ಬಾ ಬೆಳದಿಂಗಳೆ

ಬರವ ಬೇಗುದಿಯಲಿ ಬೆಂದ ಮನಕೆ
ಹೊತ್ತಿಕೊಂಡ ಅಗ್ನಿಗೆ
ಹರಿದು ಹಂಚಿದ ಹರಿದಾದ ಎದೆಗೆ
ಬೆಳಕಾಗಿ ಬಾ ಬೆಳದಿಂಗಳೆ

ತಂಗಳ ಅತಿಥಿಯಾಗಿ ಮನೆಗೆ
ಮನ ಮಹಲಿನ ಮುಃಖಗಳಿಗೆ
ಮಿತಿ ಇಲ್ಲದ ಮನದ ಮೇರೆಗೆ
ಬೆಳಕಾಗಿ ಬಾ ಬೆಳದಿಂಗಳೆ

ಪ್ರೀತಿ ತುಂಬಿದ ಪಾತ್ರೆಗೆ
ಜೋತು ಬಿದ್ದ ಜೀವದ ಯಾತ್ರೆಗೆ
ಕೊಲ್ಲುತ್ತಿರುವ ಬಯಕೆಗಳಿಗೆ
ಬೆಳದಿಂಗಳಾಗಿ ಬಾ ಬೆಳಕೆ

ಗೂಡಿನಲಿ ಗೋಡೆಯಲಿ ಹೆಡೆ ಎತ್ತಿ
ಗುಡಿಸಲ ಸಂದಿಯಲಿ ಗೂರುತ್ತಿರುವ
ಗವಾಕ್ಷರನ ಎದೆಯೊಲವಿಗಾಗಿ
ಬೆಳದಿಂಗಳಾಗಿ ಬಾ ಬೆಳಕೆ.

* * *

ಧನಿಕತೆ

ಮುಂಜಾನೆ ಮುಂಪರಿನಲ್ಲೂ
ಕಾಡುವುದೊಂದು ಪ್ರಶ್ನೆ ?
ಬೇಕು, ಬೇಕೆಂಬ ಡಿಮಾಂಡುಗಳ ಪಟ್ಟಿ....
ಕಾರು....ಬಂಗಲೆ....ಸ್ಕೂಟರ್....

ಇತ್ಯಾದಿ ಇತ್ಯಾದಿಗಳದೊಂದು ತೇದಿ
ಸಾಲದೆಂಬಂತೆ ಅವಳದೂ ಒಂದು
ಸಣ್ಣ ಪಟ್ಟಿ ಹೆಚ್ಚೇನೂ ಇಲ್ಲಾ ಬಂಗಾರದ ಹಾರ
ಮುಗಿಯಿತು ಎನ್ನುವುದರಲ್ಲೇ

ಅಪ್ಪನ ಪುತ್ರನದೊಂದು ಪತ್ರ,
ದೀರ್ಘ ದಿನ ನಿತ್ಯದ ನವೀಕರಣ
ನನ್ನ ಹಣದ ಅಪಹರಣ
ಕಿಲುಬು ಕಾಸಿಗೂ ಬರ.

ಪಕ್ಕದ ಮನೆಯುವರದೊಂದು ಕಾಟ
ಧನೀಕತೆ ಅಮಲಲ್ಲಿ ತರುವ ತರಾತುರಿ
ಫ್ರಿಜ್, ಟೀವಿ, ಕಂಪ್ಯೂಟರ್, ಮನೆ ಚಿಕ್ಕದಾಯ್ತು
ನನ್ನ ಮರ್ಯಾದೆ ಪೂರ್ತಿ ಹೊಯ್ತು.

ಹಣದಿಂದ ಮಳವಸ್ತ್ರ ಖರೀದಿಸಿದೆ
ಎಂಬ ಹೆಮ್ಮೆಯನ್ನೇರಿದ್ದೆ
ನಡೆಯಬಹುದಾದ ರಣರಂಗಕ್ಕೆ
ಸಜ್ಜಾಗಿ ಮೌನವಾಗೇ ಹೊರಟಿದ್ದೆ.

ಆಧುನಿಕತೆಯು ಧನಿಕತೆ
ಆಗ ಕೆಲವರು ಮಾತ್ರ ಉಳ್ಳವರು
ಈಗ ಎಲ್ಲರೂ ಕೊಳ್ಳುವವರು
ವಸ್ತುಗಳ ಹಾಗೆ ಹೃದಯವಂತಿಕೆ ಕೊಳ್ಳಬಹುದೆ ?

* * *

ದಿನಕ್ಕೊಬ್ಬ ದೇವರು

ಮರಕ್ಕೊಂದು ಗುಡಿ
ಗುಡಿಗೊಂದು ದೇವರು
ಹುಟ್ಟುತ್ತವೆ ಈ ದೇಶದಲಿ
ನಿತ್ಯ ನೂತನವಾಗಿ.

ಹಳೆದೇವರ ಹೇಳಿಕೆ
ಸುಳ್ಳಾದಕ್ಕೊಂದು ಹೊಸದೇವರು
ಹೊಸದು ಹಳತಾಗದೆ ?
ಹಳತು ಹೊಸದರ ಹಣಾಹಣಿ.

ಗಿಡದ ಬುಡದ ದೇವರು
ಕೆಳವರ್ಗದವರ ಪ್ರತಿನಿಧಿ
ಗುಡಿಯೊಳಗಿನ ದೇವರು
ಉಳ್ಳವರ ಡೊಳ್ಳು ಹೊಟ್ಟೆಯ ನಿಧಿ.

ಉಂಟೊಬ್ಬ ದೇವರು ಸಸ್ಯಾಹಾರಿ ಮತ್ತೊಬ್ಬ ಶಾಖಾಹಾರಿ
ಹಾರವಾಗುವವರು
ಆಹಾರವಾಗುವವರು ನಾವೇ
ಇಬ್ಬರಲ್ಲೂ ಒಂದೇ ಗುಣ ಅದುವೇ ಹೊಸತನ.

ಉದಯರವಿ ಅಸ್ತಂಗತನಾಗಿ
ಮುಂಜಾನೆ ಮರುಕಾಣಿಸಿದಂತೆ
ದಿಢೀರ್ ಪ್ರತ್ಯಕ್ಷ ಈ ದೇವರು
ಹೊಸ ಹೆಸರಿನ ಹೊಸ ಕಳೆಯಲಿ,

ಜಗದ ತುಂಬ ಹಗರಣ
ಈತ ಗುಡಿಗಾಗಿ
ಆತ ಮಡಿಗಾಗಿ
ಮತ್ತೋರ್ವ ಗದ್ದುಗೆಗಾಗಿ

ದೇಶತುಂಬೆಲ್ಲಾ ದೇವರೆ
ತುಂಬಿಕೊಂಡಾಗ ನಾವೇ ಕಡಿಮೆ
ದೇವರುಗಳೇ ಹೆಚ್ಚಾಗಿ ಪೆಚ್ಚಾಗಿದೆ ಜಗ !

* * *

ಶೋಧನೆ

ನಮ್ಮೊಳಗಿನವನು ಅವನು
ಎಲ್ಲಿ ಹೊರಟು ಹೋದನೊ ?
ಪಾತ್ರ ಮಾಡುವವನು
ಬಯಕೆಗಳ ಜಾಡು ಹಿಡಿದು
ಆಖಾಡಕ್ಕಿಳಿದು ಬಿಡುವವನು
ಬೆನ್ನುಬಿಡನು ನೆರಳಂತೆ
ಸಂಜಯನಾಗಿ ಕುರುಡು ಕೌರವಗೆ
ಲಕ್ಷ್ಮಣನಾಗಿ ರಾಮನಿಗೆ
ಬೆನ್ನು ಬಿಡದವನು
ರೂಪ ಕಂಡೊಡನೆ ಕೊಸರಿಕೊಂಡು ಓಡುವವನು
ನಗುವ ಗ್ರಹಿಸಿ ಹಿಡಿದುಕೊಳ್ಳಲು ಕೊಸರಾಡುವವನು
ನನಸಾದಾಗ ನೆನಪು ಮಾಡಿಕೊಳ್ಳುವವನು
ವಯಸ್ಸಾದಂತೆ ತೆರೆಹಿಂದೆ ಸರಿದು
ಪಡೆದ ಸುಖವನ್ನೆಲ್ಲಾ ಕೂಡಿಸಿ ಕಳೆದು
ಉಳಿದದ್ದನ್ನು ಹಾಸಿಕೊಂಡು ಮಲಗಿದವನು
ಎಲ್ಲಿ ಹೋದನೋ ?

ಬಾಲ್ಯದೊಳಗಾಡಿದ ಆಡಿದ ಆಟ
ಮಣ್ಣು ಕೆಬರಿ ಹುಡುಕುತ್ತಿರಬೇಕು
ಕಳಕೊಂಡ ನೆನಪು
ಓತಿಕಾಟವ ಕೊಂದು ಬಾಯಿಗೆ ಕೀಲು ಎಣ್ಣೆ ತುಂಬಿ
ಮಣ್ಣುಮಾಡಿ
ಕಾಸಿನ ಆಸೆಗಾಗಿ ಕೆದರಾಡಿದವನು
ಒಂಟಿಯಾದಾಗ ಕನ್ನಡಿ ಮುಂದೆ
ಕೋತಿಯಂತೆ ಕುಣಿದಾಡಿ
ಕತ್ತಲಾದೊಡನೆ ಬೆಳಕಿಗಾಗಿ ಹಂಬಲಿಸಿ
ಚಾದರ ಎಳೆದುಕೊಂಡು
ಉಸಿರು ಬಿಗಿಹಿಡಿದು ಮಲಗಿದವನು

ಎಲ್ಲಿ ಹೋದನೋ ?
ಯಾವ ವೇಷ, ಯಾವ ಪಾತ್ರ
ಯಾವ ಸನ್ನಿವೇಷಕ್ಕಾಗಿ
ಹುಡುಕಾಟ ನಡೆಸಿರುವನೋ
ಬಲ್ಲವರಾರು ?

* * *

ವರ್ಡ್ಸ್‌ವರ್ತ್‌ನೊಂದಿಗೊಂದು ದಿನ

ಅವನಂತರಂಗದಲೊಂದೆ ಮಾತು ಪ್ರಕೃತಿ
ಬರವಣಿಗೆಯುದ್ದಕ್ಕೂ ಸ್ವೀಕೃತಿ
ತುಕ್ಕುಹಿಡಿದ ಮನಸಿಗಾನಂದ ತಾಣ
ಗ್ರಹಣಬಡಿದ ಮೆದುಳಿಗೆ ಸೋಪಾನ

ಹಸಿರು ಸೀರೆಯನುಟ್ಟ ಬೆಟ್ಟಗಳ ಸಾಲ ಬೊಟ್ಟಿಟ್ಟು
ಝರಿಗಳ ಶೃಂಗಾರದ
ಜಲಪಾತಗಳ ಜೋಗುಳಂದದಿ ಹಾಡುವ
ಹರೆಯದ ನೀರೆಯ ಸುಂದರ ತಾಣವ ಕಂಡ ಜಾಣ.

ಹುಲ್ಲು ಹೂ ಕಾಮನಬಿಲ್ಲಲ್ಲು
ಸತ್ಯಕಂಡ ಆನಂದ ಉಂಡವ
ರಸಿಕತೆಯ ರಸೋಲ್ಲಾಸ
ಆಹ್ಲಾದಗಳ ತಾಣದಲಿ ತಲ್ಲಣಿಸಿದವ.

ಚಲನವಲನಗಳಲಿ ಚೆಲುವ ಕಂಡು
ಬೆಳೆಯದ ಭಾಷೆಯ ಹಿಂದಿನ ಅನುಭವ ಪಡೆದಾತ
ಪಡೆದ ಪಾಡನ್ನೇ ಹಾಡಾಗಿಸಿ
ಹೊಸೆದು ಹೊಸೆದು ಹೆಸರಾದಾತ.

* * *

ಇಲ್ಲಿ....?

ಇಲ್ಲಿ ಜೀವಕ್ಕೆ ಹೃದಯುವೇ ಇಲ್ಲಾ
ಸುಂದರ ಬಣ್ಣವಿದೆ
ಸಂವೇದನೆಯೇ ಇಲ್ಲದ ಬದುಕಿಗೆ
ಭಾವವಿದೆ ಬವಣೆ ಇಲ್ಲಾ.

ಶಬ್ದವಿದೆ ಸ್ತಬ್ದವಾಗಿದೆ
ಆಕಾರವಿಕಾರಗಳ ನಡುವೆ
ಬಿತ್ತರಗೊಳ್ಳುತ ಹಗಲು ರಾತ್ರಿಗಳು
ಸತ್ತವರ ಕನಸುಗಳಲ್ಲಿ.

ನೆಲಮುಗಿಲುಗಳ ನಡುವೆ
ಇದೊಂದು ಭ್ರಮಾಲೋಕವೇ ?
ಅಥವಾ ನನ್ನಂತಹವರಿಗೆ
ಭಾವೋದ್ವೇಗದ ಲೋಕ !

ಇರಬೇಕು ಕಣ್ಣು ಮುಚ್ಚಿದವರಿಗೆ
ಕಲ್ಪನಾಲೋಕ
ಕಣ್ಣು ತೆರೆದು ನೋಡಿದವರಿಗೆ
ಕಟುವಾಸ್ತವದ ಕಹಿಲೋಕ.

* * *

ಹೀಗೆ....

ಹುಡುಗಿಯರೇ ಹೀಗೆ
ನನ್ನಾಳಕ್ಕಿಳಿದುಬಿಡುತ್ತಾರೆ
ಭಾವುಕನನ್ನಾಗಿ ಮಾಡಿ
ಮುಖದಲಿ ಮೂಡುವ
ಗೆರೆಗಳನ್ನು ಎಣಿಸಲೆತ್ನಿಸುತ್ತಾರೆ.

ಮನಸನ್ನ ಕದ್ದು
ಗುದ್ದಾಡುವಂತೆ ಮಾಡಿ
ಗೆದ್ದೆವೆಂದು ಓಡಿಬಿಡುತ್ತಾರೆ
ನೆನಪುಗಳ ಸವಿಸವಿದು
ಸಮಾನತೆ ಬಗ್ಗೆ ಮಾತನಾಡುತ್ತಾರೆ.

ಅರ್ಥವಾಗುವ ಮುನ್ನ
ಅಪಾರ್ಥವಾಗಿಬಿಡುತ್ತಾರೆ
ವ್ಯರ್ಥಕನಸು ಕಂಡು
ತಲೆ ಕೆಡಿಸಿಕೊಂಡಾಗ
ದೂರದಿಂದಲೇ ಅಯ್ಯೋ ಎನ್ನುತ್ತಾರೆ.

* * *

ನಾನು

ಸ್ವಚ್ಛ ಬಿಳಿಹಾಳೆ
ಮಾಡುವ ಚಿತ್ರವಿಚಿತ್ರ
ಭಾವಗಳಿಗೆ ಕಾರಣ ನೀ.

ನಿನ್ನೆ ನಾಳೆಗಳ ಕೊಂದು
ಬದುಕಬೇಡಾ ನೀ
ನೊಂದಿದೆ ಮನ.

ಮೋಸ ಹೋಗದಿರು
ಹುಸಿಮನಸಿಗೆ
ಮನಸ ಮಲ್ಲಿಗೆ ಹೊಸಕದಿರು.

ಅಂತರಂಗದ ತರಗತಿಗಳಲ್ಲಿ
ಬರಿ ನಿನ್ನವೇ ಕ್ಲಾಸುಗಳು
ಸ್ಪೆಷಲ್ ಕ್ಲಾಸ್ ಮಾತ್ರ ಆಗಬೇಡಾ.

* * *

ಅಸ್ತಿತ್ವ

ನಾನು ಶೋಧಿಸುತ್ತಿದ್ದೇನೆ
ನನ್ನ ಅಸ್ತಿತ್ವದ ಬೇರುಗಳಿಗಾಗಿ
ಬರಡು ಭೂಮಿಯಂತಿರುವ ಅಸ್ತಿತ್ವ
ಅವ್ಯವಸ್ಥೆಯಾದ ವ್ಯವಸ್ಥೆಯಲಿ.

ಎಲ್ಲೊ ಸಿಕ್ಕಿಕೊಂಡಿತ್ತು ಚೂರು
ನೆನ್ನೆ ಮೊನ್ನೆಯವರೆಗೆ ಅಲ್ಲಿ ದಂಗೆ ಎದ್ದಾಗ
ಮತ್ತೆಲ್ಲೊ....ಹುಡುಕಾಟ.

ನನ್ನೊಂದಿಗೆ ಹುಟ್ಟಿದ ವಿಚಾರಗಳು
ಜೀವಂತವಾಗೆ ಸುಡುತಿವೆ ಎನ್ನ
ವರ್ಣಗಳಲ್ಲೆಲ್ಲಾ ಜಾಲಾಡಿ
ಸಿಕ್ಕರೂ ಸಿಗಬಹುದೆಂದು.

ಮೂಲವರಿಯದ ಮೂಢರಿಗೆ
ತಿಳಿಸಬೇಕೆಂದುಕೊಂಡಿದ್ದೆ.
ಮೂಲ ಅರಿಯದ ನಾನು
ಮಾತಾಡದೆ ಮೌನಿಯಾಗಿದ್ದೇನೆ....

* * *

ಬವಣೆ ಮತ್ತು ಅವನು

ಮುರುಕ ಮಂಚದ ಮೇಲೆ
ದಿನಗಳನ್ನೆಣಿಸುತ್ತಾ
ಶರಶೈಯ್ಯೆಯಲ್ಲಿದ್ದ ನನ್ನವ್ವ
ಕ್ಷಣಕ್ಷಣಕ್ಕೂ ವಾಸ್ತವದ ಕೊಂಡಿ ಕಳಚಿಕೊಳ್ಳುವಾಗ
ನನಗೆ ನೆನಪಾಗಿದ್ದು
ತುಂಡು ರೊಟ್ಟಿಗಾಗಿ ಕಾಡುತ್ತಿದ್ದ
ಹಸಿವಿನಲ್ಲೂ ತೃಪ್ತಿ ಕಂಡು
ಹೆತ್ತು ಹೊತ್ತು ಸಾಕಿ ಋಣಮುಕ್ತಳಾದಳು
ತೀರಿಸಿದಾಗ ಹೊರೆ ಹೇರಿ
ಹೊಳ್ಳಿ ಬರದ ದಾರಿಹಿಡಿದು ಮಾಯವಾದಾಗ
ಕಲಿತ ವಿದ್ಯೆಯಾಗಲಿ ಗಳಿಸಿದ ಹಣ
ಬೆಳೆಸಿಕೊಂಡ ಸಖ್ಯ
ಬದುಕಿಗೆ ಬಾರದಾದವು.

ಬದುಕಿದಾಗ ಬವಣೆ ಪಟ್ಟು
ನಾ ನಕ್ಕಾಗ ತುಟಿಬಿರಿದು ನಗೆನಕ್ಕು
ನನ್ನೊಳಗೇನೋ ಹುಡುಕುವಾಗ
ಹೊಸಬದುಕಿಗೆ ಹೊರೆ ಎನಿಸಿದ ಅವ್ವ
ಮತ್ತೆಂದು ಏನನ್ನೂ ಕೇಳದೆ ಮುನಿಸಿಕೊಂಡೆ
ಮರೆಯಾದಳು ನೆರಳಿನಂತೆ.

* * *

ಅಶೋಕನ ಶೋಕ

ಅಶೋಕ ಶೋಕ ತಪ್ತನಾಗಿದ್ದ.
ಅಸಹಾಯಕ ಬದುಕು ಅಸಹನೀಯುವಾದುದು ಕಂಡು
ಕಳಿಂಗ ನಾಡಿನ ಬಿಳಿಮಣ್ಣು
ಕೆಂಪಡರಿ ತಂಪಾಗಿ ರಕ್ತದ ಪಿಪಾಸೆಯಾಗಿದ್ದ ಕಂಡು

ಕನಸುಗಾಣದ ಮನಸುಗಳು
ರಣರಂಗದಲಿ ಹೆಣಗಳಾಗಿ ಉರುಳಿದ್ದವು.
ಮೌನ ಮುರಿದು ಮಾತಾಡಲಾಗದೆ
ಶೂನ್ಯನೋಟ ಅಶೋಕನನ್ನು ಕಾಡುತ್ತಿತ್ತು.

ಅವ್ಯಕ್ತ ಭಾವನೆಗಳ ಬೆನ್ನತ್ತಿ
ಇತಿಹಾಸ ದೂಷಿಸಿತೆಂದು ಹೆದರಿ
ಮುದುಡಿಕೊಂಡು ಮುಸಿಮುಸಿ ಅಳುತ್ತಿದ್ದ
ಅಳುತ್ತಲೇ ಇದ್ದ.

ನಿರಪರಾಧಿಗಳ ಕೊಯ್ದು ಕುತ್ತಿಗೆ
ಮತ್ತೆದು ಮಾತಾಡಿ
ಆದಾವ ದ್ರೋಹ ಮಾಡಿದ್ದೆವು
ದೊರೆ ನಿಮಗೆ

ಎದೆಯೊಳಗಿನ ನೋವು
ಕಾವಾಗಿ ಕನವರಿಸಿದ ನಾತ
ಬುದ್ದ ಅಹಿಂಸೆಯು ಸಾರಿದ
ಜಾಡು ಹಿಡಿದ ಮತ್ತೆ ಮರಳದೆ.

* * *

ನೆನಪುಗಳ ಸುತ್ತ

ಈ ನೆನಪುಗಳೇ ಹೀಗೆ
ಹಳೆ ಮನೆಯ ಧೂಳಿನಂಗೆ
ಒಟ್ಟುಗೂಡುತ್ತವೆ ಗುಡ್ಡದಂಗೆ
ಹೆಪ್ಪುಗಟ್ಟುತ್ತವೆ ಹಿಮಾಲಯದಂಗೆ

ಗೋಡೆಯ ಮೇಲೆ ಕೀ ಕೊಡದ ಗಡಿಯಾರ
ನೂರು ವರ್ಷದಿಂದ ನಿಂತಂತೆ
ತಲೆಯಲ್ಲಿ ತೂಗುತ್ತವೆ
ತಾಗಿ ತಾಗಿ ಎದೆಯ ನೋಯಿಸುತ್ತವೆ

ಮುಷ್ಠಿಯೊಳಗೆ ಹಿಡಿದ ಉಸುಕಿನಂತೆ
ಬಿಡಿಸಿಕೊಂಡೊಯ್ಯುತ್ತವೆ
ಮೂಲೆಯಲ್ಲಿಟ್ಟ ಮೂರ್ತಿಯಂತೆ
ಮೂಕನನ್ನಾಗಿಸಿಬಿಡುತ್ತವೆ

ಹೆಣೆಯುತ್ತವೆ ಹಣೆಬರಹದ ಸುತ್ತ
ಜೇಡನ ಬಲೆಯಂತೆ ಜಾಡ
ಜಾಡಿಸಿದರೂ ಜೋತು ಬೀಳುವ
ಜಾಯಮಾನಕ್ಕೆ ಸೇರಿವೆ

ಕಿತ್ತೆಸೆದರು ಕತ್ತು ಹಿಸುಕಿ
ಕವಲುದಾರಿಯಾಗಿಬಿಡುತ್ತವೆ ಎಡೆಬಿಡದೆ
ಬಣ್ಣದ ಬುಗುರಿಯ ಮಾಡಿ ತಿರುಗಿಸುತ್ತವೆ
ತಗಾದೆ ಪ್ರಪಂಚದಿ.

* * *

ಕೋಗಿಲೆ ನೀನೇಕೆ ಹಾಡುವುದಿಲ್ಲ ?

ವಾಸ್ತವದ ಕಟುಸತ್ಯ
ಹೊತ್ತಿ ಉರಿಯುತ್ತಿದೆ ಒಡಲು
ಊರು ಕೇರಿ
ಕೊಟೆ ಕೊತ್ತಲು ಕಾಡು ನಾಡ ಮೀರಿ
ಬಸರಿಯ ಗರ್ಭದಲಿ
ಪಾಪದ ಪಿಂಡ ಕೆಂಡದುಂಡೆಯಾಗಿ
ಪ್ರಸವವೇ ಇಲ್ಲಾ.
ಮೌನವೇ ಮಾತಾಗಿ ಘಾಸಿಗೊಳಿಸಿದೆ
ಹಾಡು ಎದೆಯೊಳು ಹುದುಗಿದೆ
ಪರಿಪರಿ ಯತ್ನದಲ್ಲಿ
ಬರಿ ಅಪಸ್ವರ

ಬದುಕಿನ ಸುತ್ತಲ ಬೇಲಿ
ಬಿಗಿಯಾಗಿ ಭಾರವಾಗಿದೆ
ಹೆಗಲ ಮೇಲಿನ ಜಾತಿಯ ನೊಗ
ಧ್ವನಿ ಗಂಟಲೊಳಗೆ
ಮಾರ್ದನಿಯಾಗಿ
ಗಾವುದ ಗಾವುದ ಮೀರಿ ಸಾರುವಂತೆ
ಗತ್ತಿಲೆ ಕೂಗುತ್ತಿದ್ದೆ.
ಗೊತ್ತೆ ?
ನೀ
ಅದು ಹಾಡೆಂದೆ ನಾ.
ಕೋಟಿ ಜನರ ಹಸಿದೊಡಲ
ಅಂತಃಕರಣದ
ಕೂಗೆಂದು ಬಲ್ಲೆ ನಾ.
ನನ್ನ–ನಿನ್ನ ಸಂದಿಗ್ಧತೆಯಲಿ
ಹಾಡು.... ಹೆಪ್ಪುಗಟ್ಟಿದ ಹಾಲು
ಕದಡಿ ಕೆಡಿಸಿದರೆ

ಅಂದ ಕಳೆದುಕೊಂಡು ನೀರು
ನನ್ನ ತರ್ಕಕ್ಕೂ ನಿನ್ನ ಹಾಡಿಗೂ
ತಾಳೆ ಸಿಗಲೊಲ್ಲದು
ಎಣಿಸು ಗುಣಿಸುತ್ತೇನೆ
ನಿನ್ನ ಹಾಡು ಹಾಡಾಗುವವರೆಗೆ.

* * *

ನಾವು ಹೀಗೆ

ಕಳೆದುಕೊಳ್ಳುತ್ತೇವೆ ನಾವು
ಯಾವುದೊಂದು ಲೋಕದಲ್ಲಿ
ನಕ್ಕವರ ನಗುವಿಗೆ
ಕ್ಲೀನ್‌ಬೋಲ್ಡಾಗಿ ಬಿಡುವ ನಾವು ಹೀಗೆ

ಎಲ್ಲೋ ಸದ್ದಿಲ್ಲದೆ ತಿರುಗುವ
ಕಲ್ಪನೆಗಳಿಗೆ ಆಣೆಕಟ್ಟು ಕಟ್ಟಿ
ಭದ್ರನೆಲೆಯೂರಬೇಕು ಎನ್ನುವುದರಲ್ಲೇ
ಟಿಸಿಲೊಡೆವ ಸಂಬಂಧ ನಾವು ಹೀಗೆ

ದುರ್ಬಲ ಮನಕ್ಕೆ ದುಂಬಾಲು ಬಿದ್ದ
ಭಾವನೆಗಳ ಬಗೆಹರಿಸಲು
ಬಾಯಿತೆರೆದು ಹಲೋ ಎನ್ನುವಷ್ಟರಲ್ಲೇ
ಬಾಯ್ ಎನ್ನುವ ನಾವು ಹೀಗೆ

ಹೋದ ಮಾತನು ಹೆಗಲಿಗೇರಿಸಿ
ಕಾಯ್ದು ಶಬರಿಯಂತೆ
ಬಂಧನಕ್ಕೆ ದಿಗ್ಬಂಧನ ಹಾಕಲು
ಹಾತೊರೆಯುವ ನಾವು ಹೀಗೆ....

* * *

ವಾಸ್ತವಿಕತೆ

ಓಹೋ.... ಏಳು ಮಹರಾಯ
ಕಲ್ಪನೆಯ ಲೋಕದಿಂದ
ಕನಸಿನರಮನೆ ಕಟ್ಟುತ್ತಿರುವೆಯಾ
ನೋಡಲ್ಲಿ ವಾಸ್ತವೀಕ ಪುರುಷನ.

ಹೆಬ್ಬಾವಿನ ಹಾಗೆ ಸುತ್ತುತ್ತಿರುವ ಸಮಸ್ಯೆ
ಹೊಗೆಯಿಂದ ಕಪ್ಪಾದ ಮರ
ಕಿವಿಕೊರೆವ ಶಬ್ದ
ಚಿತೆಯಾಗುತ್ತಿರುವ ಚಿತ್ಕಾರ.

ದೇಶದ ಮೂಲೆ ಮೂಲೆಯಲ್ಲಿ
ಹರಿಯುತ್ತಿಹುದು ರಕ್ತದ ಹೊಳೆ
ಆಕಸ್ಮಿಕವಾದ ಜೀವ
ಹೋದವರು ಬರುವರೆಂಬ ಸುಳ್ಳು ಭರವಸೆ.

ರಕ್ತ ಬೆವರಾಗಿಸಿ ದುಡಿವರು
ಸುಕ್ಕುಗಟ್ಟಿದ ದೇಹದಲಿ
ಯಪ್ಪಾ ಸಾವುಕಾರರೇ ಎಂದು
ಬಾರದ ದಿನಗಳಿಗಾಗಿ ಕಾಯುತಿಹರು.

ಸ್ಕೂಟರ್ ಕಾರುಗಳಲ್ಲಿ ತಿರುಗುವಾಸೆಯೋ
ಬಂಗಲೆ ಕಟ್ಟಿಸಬೇಕೆ
ಹೆಸರು ಗಳಿಸಬೇಕೆಂಬ ಹಂಬಲ
ಜೀವವೇ ಶಾಶ್ವತವಲ್ಲ.

* * *

ಭಾವಗೀತೆ

ಕೆರೆಯಂಗಳದ ಹಿರಿಹಳ್ಳ ದಾಟುವಾಗಿನ ಹುದುಲು
ಬದಲಾಯ್ತು ಕಾಲ ಕೆರೆಬತ್ತಿ ಮಾಯವಾಯ್ತು ಹಳ್ಳ

ಗ್ರೀಷ್ಮದಲಿ ದಂಟಿಗೆ ಬೆಂಕಿ ಇಟ್ಟು ಕಾಲು ಚಾಚಿ
ಮೈ ಕಾಸುವಾಗ ಹಸಿದ ಹೊಟ್ಟೆ ಚುರ್ ಅಂದಿದ್ದು

ಗೌಡರ ಮದುವೆಯಾಟಕೆ ಬರುವೆನೆಂದು ಹಠ ಹಿಡಿದು
ರಟ್ಟೆಯ ಮ್ಯಾಲ ಬಾಸುಂಡಿ ಬರುವಂತೆ ಹೊಡ್ತಾ ತಿಂದು

ಅಜ್ಜ ಸತ್ತಾಗ ಅಪ್ಪ ಅತ್ತಿದ್ದು ಯಾಕೆ ?
ಅವ್ವ ಸತ್ತಾಗ ತಿಳಿಯಿತು ಸತ್ಯ

ಏಡಿ ಹಿಡಿದು ಸುಟ್ಟು ತಿಂದಾಗ
ಹಸಿವು ಬೆನ್ನ ಬಿಟ್ಟಿರಲಿಲ್ಲಾ

ಹರೆಯದ ಬಯಕೆ ತಡೆಯದೇ ಶೋಧಿಸಿದಾಗ
ಮನಸು ಕೊಟ್ಟವಳು ಮರೆಯಾದಾಗ

ಬದುಕು ಭಾವಗೀತೆ
ಭಾವನೆಗಳದ್ದೆ ಕಾರುಬಾರು ನಮ್ಮದಿಲ್ಲಾ ತಕರಾರು

* * *

ಎಂಟಾಣೆ ಮತ್ತು ಜೋಗತಿ

ನೂರ್ಗರಿಯಿಂದ ಸಿಂಗರಿಸಿಕೊಂಡ ಕೊಡ
ಮುನ್ನೂರು ವಿಚಾರಗಳಿಗೆ ಸ್ಪಂದಿಸುವ
ಪುಟ್ಟ ತಲೆಯ ಮೇಲೆ ಹೊತ್ತು
ಉಧೋ ಎನ್ನುತ್ತಿಹಳು ಬಾಲೆ

ಪರಿಪರಿಯ ಕಲ್ಪನೆಗಳ ಹೆಣೆಯುತ್ತ
ಜನಜಂಗುಳಿಯಲ್ಲೂ ಬೇರೊಂದು ಲೋಕದಿ
ಧಾರವಾಡ ಲೈನ್ ಬಜಾರ್‌ನಲಿ
ಹೊರಟಿದ್ದೆ ಒಂದು ದಿನ

ಎದಿರು ಕೈಚಾಚಿ ನಿಂತಾಗ
ನಾಸ್ತಿಕ ಭಾವನೆ
ಹರೆಯದೊತ್ತಡದಲ್ಲೂ ದೇವರಿಗೆ ಬಲಿ
ಮೂಡಿ ಮುಳುಗಿದ ಭಾವನೆಗಳು ಅರ್ಥವಾಗಲೇ ಇಲ್ಲಾ

ನಂಬಿಕೆಗಳೆಲ್ಲಾ ನನ್ನ ಬಿಟ್ಟು ಹೋಗಿದ್ದವು
ಸುಂದರ ವದನದೀ ಅಸ್ಪೃಶ್ಯಗಳಿಗೇಕೆ ಒಲಿಯಬೇಕು
ಬೇರಾರು ಸಿಗಲಿಲ್ಲವೇ ಬಡವರ ಹೆಣ್ಣು ಬಿಟ್ಟು ?
ವಿಚಾರಗಳ ತಾಕಲಾಟದಲಿ ಕೈ ಜೇಬಿಗಿಳಿದು ಎಂಟಾಣೆ
ಅವಳ ಕೈ ಸೇರಿತ್ತು.

ಭಾವನೆಗೂ ಬದುಕಿಗೂ
ಇರುವ ನಂಟನ್ನ ತರ್ಕಿಸಿದೆ....
ನೆಲೆ ನಿಲುಕುವಂತೆ ಕಾಣಲೇ ಇಲ್ಲಾ
ಒಳಗಿನ ಸೂಪ್ತ ಭಾವನೆಗೆ ಬೆರಗಾಗಿ ನಾ ನಕ್ಕೆ

* * *

ಕಾರವಾರ

ಕಡಲೊಳಗೆ ಮಲಗಿರುತ್ತದೆ
ರಾತ್ರಿಯ ನೀರವತೆಯಲಿ
ಅಲೆಗಳಿದ್ದು ಸದ್ದಿಲ್ಲದೆ ಸಾಯುವಾಗ
ಕಡಲು ರೋಧಿಸುತ್ತದೆ.

ಕಾರವಾರ ಆಗ ನಿರ್ಲಿಪ್ತ
ಮೀನು ಮಾರುವ ಹುಡುಗಿಯರು
ಮೌನ ಮುರಿದು ಮಾತಾಡಿದಾಗ
ಮಾತೆ ಸಂಪತ್ತಾಗುತ್ತಿದೆ

ತೆಂಗು ತಲೆ ಎತ್ತಿದಾಗ
ಹಲಸು ಹುಲಸಾಗುತ್ತಿದೆ ಇಲ್ಲಿ
ಎಲ್ಲಾ ಎಲ್ಲೆಗಳ ಮೀರಿ
ನಿಂತ ಬೆಟ್ಟಗಳ ಸಾಲು, ಭಯಹುಟ್ಟಿಸದು

ಇಂದು

ಷಡೆಯ ತಡಿಯಲ್ಲಿಯೇ ಪಾಪ
ರಕ್ತಕ್ಕಾಗಿ ಬಾಯಿಬಿಟ್ಟ ನೆಲೆ
ಬಂದೂಕುಗಳ ಸದ್ದಿಲ್ಲದ ಸವಾರಿ
ಮೀನುಗಳಂತೆ ಮನುಷ್ಯರ ಹೆಣ

ಬುಟ್ಟಿಯಲ್ಲಿ ಮಾರುವ ಕಾಲ
ಕಾರವಾರ ಕಡಲ ಕಿನಾರೆ
ಸೌಂದರ್ಯ ಕಳಕೊಂಡು
ನಲುಗಿದೆ ಕಾರವಾರ ಎಂದು
ವಿಕಾರಗೊಳ್ಳುತ್ತಲಿದೆ ನಿತ್ಯ ನಿರಂತರ.

* * *

ತಳಮಳದ ಕ್ಷಣಗಳು

ಸಾಲಿಗಂತ ಬರ್ತಿದ್ವಿ
ಆಡಿ ಹಾಡಿ ಕುಣಿದಾಡ್ತಿದ್ವಿ
ಜೇನು ನೊಣ, ಮೂಲ್ಯಾಗಿನ ಮಂಗ್ಯಾ
ಸ್ವಾಗತಿಸುತ್ತಿದ್ದವು ನಮ್ಮನ್ನ

ಡಿಪಾರ್ಟ್‌ಮೆಂಟಿನ ಮುಂದಿನ
ನೀರು ಸೋಸೊ ಯಂತ್ರದ ಶಬ್ದದಾಗ
ನಮ್ಮ ಶಬ್ದ ಒಂದಾಗಿ ಬಿಡುತ್ತಿತ್ತು
ನಮ್ಮನ್ನ ನಾವು ಮರಿತಿದ್ವಿ

ಹಸಿಬಿಸಿ ತುಸು ಕನಸು
ತಗೊಂಡು ಭವಿಷ್ಯತ್ತಿನತ್ತ ಇಣಕಿದ್ವಿ
ಹೆಣ ಆಗಿದ್ದವು ತುಸು ನೊಣದಂಗ ಮುಕರಿದ್ವು
ಎರಡರ ಮೋಜು ಕಾಣ್ತಿದ್ವಿ

ಮ್ಯಾಲ ಬರೋ ಮುಂದ
ಚಂಪಾರ ಕುದರಿ ಗಿರಡ್ಡಿಯವರ ಸ್ಕೂಟರ್
ಮನ್ಸೂರರ ಲೂನ
ಎಚ್.ಓ.ಡಿ.ಯವರ ಕಾಲ್ಗಾಡಿ ನೋಡಿ

ಪಿ.ಎನ್.ಆರ್. ಮೇಡಂ ಬಾಗಿಲದಾಗ ಏನೋ ನೋಡಿ
ಪಾರಮ್ಮ ಬದಿ ಎಚ್.ವಿ.ಪಿ.ಮೇಡಂ
ಎಲ್ಲೆಲ್ಲೂ ಸುತ್ತಿ ಮತ್ತೆ ಛೇರ್ಮನ್
ಸಿ.ವಿ.ವಿ. ಕಡಿ ಬಂದ್ವಿ ಅಂದರೆ

ಮುಗಿತೆಲ್ಲಾ ಕೆಲಸ
ಚಂಪಾರ ಏನಾದಿ ಏನಾದಿ
ಸಾಹೇಬರ ಟೇಬಲಿನ ಮ್ಯಾಲಿನ ಮಂಗ್ಯಾದಿ
ಪಾಠ ಕೇಳೊ ಮುಂದ ಮಂಗನಂಗ ಕುಂತು

ಮನಿಗ ಹೋಗೊ ಮುಂದ ಹೀರೋನ ಹಂಗ
ಪೋಸ್ ಕೊಡ್ತಾ ಹುಡುಗ್ಯಾರ ಹಿಂದ ಬೆನ್ನಹತ್ತಿ
ಚಾ ಕುಡಸಾಕ ಟೋಪಿ ಹಾಕಿ
ಚೀಟಿ ಎತ್ತಿ ಚುರಮುರಿ ತಿಂದು

ಚಹಾ ಕುಡದ ಆ ಚಲುವಿನ ದಿನ
ಮುಗಿದುಹೋದಾಗ ನೆನಪಿನದೆ ಆಟ
ತಳಮಳ ತಾಳಿಕೊಳ್ಳದ ವೇದನೆ
ನಡೆಯಬೇಕು ದೂರ ಬದುಕು ನಿಂತ ನೀರಲ್ಲ

* * *

ನಾಗರಿಕ

ನಾಗರೀಕರಾಗುತ್ತಿದ್ದೇವೆ
ಅಂತರಂಗ ತೊಳೆದುಕೊಂಡು
ಹಾರುತ್ತಿರುವ ವಿಮಾನ
ಹವಾಯಿ ಜಹಾಜು, ಕಂಪ್ಯೂಟರ್
ಯಂತ್ರಮಾನವ
ನಾಗರೀಕತೆಯ ಕುರುಹುಗಳು

ಇನ್ನೊಬ್ಬರ ಬವಣೆ ನೋಡಿ
ಮರಗುವುದಿಲ್ಲ ನಾವು ನಾಗರೀಕರು
ನಿತ್ಯ ನೂತನವಾದ ಅಪಘಾತಗಳು
ಚಿಂದಿಯುಟ್ಟವರ ಚಿಂತೆ ಇಲ್ಲಾ
ನಮ್ಮದು ದುಃಖ ತೋಡಿಕೊಂಡರು
ಮನಕರಗಿ ಮರಗುವದಿಲ್ಲ ನಾಗರಿಕರು

ಕೊಳಚೆಗಳ ಕೋಡಿಗೆ ಹರಿಬಿಟ್ಟು
ವಾಯು, ಶಬ್ಧ, ನೀರು ಮತ್ತೇನು ಉಳಿದಿಲ್ಲ
ಮಲೀನಗೊಳಿಸಲೆಮಗೆ
ಸಾಗರವೂ ಖಾಲಿಯಾಯಿತೇ ?
ದೊಡ್ಡ ಸಾಧನೆ ನಮ್ಮದು
ನಾವು ನಾಗರೀಕರು

ಗೊತ್ತಿರಬಹುದು ತಮಗೆ
ಮೌನ ಮೌನ ವಸಂತಕಾಲ
ಕಾಣೆ ಬೆಳ್ಳಕಿನ ಸಾಲಿನ ಬಾನ

ಹುಲಿ ಆನೆ ಚಿರತೆ
ಕಂಡವರುಂಟು ಅಪ್ಪ, ಅಜ್ಜ
ನಾ ನೋಡಿದ್ದು ಪುಸ್ತಕದ ಹಾಳೆಯಲ್ಲಿ

ಕೋಟು, ಬೂಟು, ಸೂಟು
ಬಿಳಿಮೈಯಲ್ಲೂ ಕರಿಹೃದಯ ಹೊತ್ತು
ಖಳನಾಯಕರು,
ಅನಾಗರೀಕರಾಗಿ ನಟಿಸುತ್ತ
ಸಂಸ್ಕೃತಿ ಅಪಶೃತಿಯಲ್ಲಿ
ನಮ್ಮದೇ ಶೃತಿ ಸೇರಿಸ ಹೊರಟ ನಾವು ನಾಗರಿಕರು

* * *

ಗೊಂದಲ

ಕಾವೇರಿದ ಬದುಕಿನಲಿ
ಕವಲುಹೊಡೆಯುತ್ತವೆ ಬಯಕೆಗಳು
ಕತ್ತರಿಸಿ ಒಡಲ ಹುರಿಯು
ಹುತ್ತವಾಗಿರುವ ನೋವು
ನೀರಾಗಿ ಹರಿದಾಗ ಕವನವಾಗುತ್ತವೆ ಶಬ್ದ

ಕಳೆದ ನೆನ್ನೆಯ ನೆನಪು
ಎಚ್ಚತ್ತುಕೊಂಡಾಗ
ಹುಚ್ಚೆದ್ದು ಕುಣಿಯುತ್ತವೆ ಇಂದು
ನೊಂದ ನನ್ನಾಳದ ನನ್ನವರು
ದಣಿವಾರಿಸಿಕೊಳ್ಳುವಾಗ ವಿಶ್ರಮಿಸುತ್ತದೆ ವೇಳೆ

ಸುಟ್ಟ ಹೆಣದ ಬೂದಿ
ಹಾರಿ ಧರೆಯೊಳಾವರಿಸೆ
ಹಳಿಹಳಿಸುತ್ತಲೇ ಬಂದಾಗ
ದೆವ್ವವಾಗುತ್ತದೆ ಭ್ರಮೆ
ಸತ್ತವರ ನೆರಳು ನಿಂತ ಹಾಗೆ ನಿಲ್ಲುತ್ತದೆ ಬದುಕು

ಎಂದಿಗೂ ಅರ್ಥವೇ ಆಗದ
ಸ್ವಾರ್ಥಿ ಬದುಕು
ಕೈಗೆಟುಕದ ಗುಟುಕಾಗಿ
ಗುಲಾಮಗಿರಿಯ ಗೋಸುಂಬೆಯಾಗಿ
ಗರಿಗೆದರಿದ ಮನಕೆ ಮುಸುಕಾವರಿಸುತ್ತದೆ.

* * *

ಕ.ವಿ.ವಿ.ಗ್ರಂಥಾಲಯದಲ್ಲೊಂದು ಸಲ

ಧೂಳು ತಿಂದ ಪುಸ್ತಕಗಳ ಘಾಟು ವಾಸನೆಯಲ್ಲೆಂದು
ಮಲ್ಲಿಗೆ ಕಂಪು ಅಡರುವುದಿಲ್ಲಾ.
ಹಾಳೆಗಳ ತೀಡಿ ತೀಡಿ
ಹಾರುವ ಮನಸು ಹಿಡಿಹಿಡಿದು
ಓದಿ ಬಳಲಿದ ಮನಕೆ
ಮುದ ನೀಡುವ ಕನಸು
ಪುಸ್ತಕ ಹುಡುಕುವಾಗ ಕಳಕೊಂಡದ್ದು
ಸಂಧಿ ಸಂಧಿಯೊಳಗೆ ಹುಡುಕಿದರೂ
ಸಿಗಲಿಲ್ಲವಂದು.
ತಿಂದ ತಂಬಾಕು ಉಗುಳಲೆಂದು ತೆರೆದರೆಟಕಿ
ನುಗ್ಗಿದ ಗಾಳಿ ತಂಪೆನಿಸಿದಾಗ
ಬರೆದದ್ದು ಓದಿದ್ದು ವ್ಯರ್ಥವೆನಿಸಿ
ಹೊಸ ಬದುಕಿನ ಅವಿಷ್ಕಾರದ ಆತುರ
ಅದೇ ರಾತ್ರಿಯ ಮೂಲಕಾಟಗಳು
ಹಗಲಿನ ಗಂಭೀರತೆ
ಕಳದು ಹೋಯಿತೆ ಯವ್ವನ
ಹಿಡಿದಿಡಬೇಕೆಂದರೆ ?
ಪಕ್ಕದ ಫ್ರಾಕಿನ ಹುಡುಗಿ
ಹವಳದಂತ ತುಟಿಗಳರಳಿಸಿ
ದಾಳಿಂಬೆಯಂತ ದಂತ ಪಂಕ್ತಿ ತೋರಿದಾಗ
ಹದಿನಾರು ನೆನಪಾತು
ಎಷ್ಟು ಬೇಗ ಕಳೆದು ಹೋಯಿತು ಹೊತ್ತು ?

ಮನದ ಹಸಿವು ಇಂಗಲಿಲ್ಲಾ
ಪುಸ್ತಕದ ಹಂಗು ತೀರಲಿಲ್ಲಾ
ಮೇಲಿನಿಂದ ಕೆಳಗೆ
ಕೆಳಗಿನಿಂದ ಮೇಲೆ
ಅಡ್ಡಾಟದ ಸರ್ಕಸ್ಸಿನ ನಡುವೆ
ಸಂಶೋಧನೆಯ ಹುಡುಕಾಟ
ನಡೆದೇ ಇದೆ ನಿರಂತರ.

* * *

ವಿನ್ಸ್ಲೆಟ್‌ಗಳಿಗೆ

ಟೈಟಾನಿಕ್ ಸಿನಿಮದ ಹುಡುಗಿ
ಸ್ನಿಗ್ಧ ಸುಂದರಿ
ಕಾಡುತ್ತಾಳೆ ನೆನಪಿನತುಂಬೆಲ್ಲ
ರಾದ್ಧಾಂತ ಮಾಡುತ್ತಾಳೆ.
ಎಂಥ ಸೌಂದರ್ಯ?
ಮನದೊಳಗೆಲ್ಲೋ ಒಂದೆಡೆ ಸರಸವಾಡುತ್ತಾಳೆ
ಅಭಾ!
ಏನು ಚೆಲುವೇರೀ
ಹಲ್ಲಿಲ್ಲದ ಬೊಚ್ಚುಬಾಯಿ ಮುದುಕಾ
ಬಾಯಿ ಚಪ್ಪರಿಸುವಾಗ
ಚೆಲುವ ಕೊಂಡಾಡಲೇಬೇಕಾದೀತು
ಹೋಲಿಕೆ ಇಲ್ಲದ ಚಂದ
ಹೊಸದಿಗಂತದ ಅಂದ
ಪರದೆ ಮೇಲಿನ ಚಿತ್ರ ಅಮೂರ್ತ
ಮನದೊಳಗಿ ಮೂಡಿ ಹೋಯಿತೆ ಕ್ಷಣ ಮಾತ್ರ
ಬ್ರಹ್ಮ ನೀ ಶುದ್ಧ ಪಕ್ಷಪಾತಿ
ಅವಳನ್ನ ದಂತದಿಂದ ಕೆತ್ತಿ
ನಮ್ಮೊಳಗೆ ಆಶೆಯ ವಿಷಬೀಜ ಬಿತ್ತಿ
ಮಾಡಿಬಿಟ್ಟೆಯಲ್ಲಾ ಕರಾಮತಿ....

* * *

ಮಾತಿನ ಜಾಡಿಗುಂಟ

ಮಾತು ಬರಿ ಶಬ್ದಗಳ ಜೋಡಣೆಯಲ್ಲ
ಕೆಲವರ ಮಾತಿಗೆ ಅರ್ಥವಿರುವದಿಲ್ಲ
ಕಣ್ಣು ಮನಸಿನಲ್ಲಿ ಕದ್ದಾಡು ಮಾತು
ಹೊಸದೊಂದು ಹಸಿಬಿಸಿ ಕವಿತೆಯಂತೆ
ರಾಮನಾಡಿದ ಮಾತು ಸೀತೆಗೆ ಮುಳುವಾತು
ಅಗಸನ ಹುಸಿಮಾತು ಇತಿಹಾಸವಾಯ್ತು
ಕೊಟ್ಟ ಮಾತು ಬಿಟ್ಟಬಾಣಗಳೆಂದು ರೀಲು
ಬಿಟ್ಟ ಭೂಪರೆಲ್ಲಾ.
ಮರಳಿ ಬರಲೇ ಇಲ್ಲಾ,
ಮಾತು ಮುದ ನೀಡುತ್ತವೆ ಹಲವರವು
ಕೇಳಿದರೂ ಸಾಲದು ಮತ್ತೆ ಕೇಳಬೇಕು ಹಲವರವು
ವರ್ತಿನೀರಿನಂತೆ
ಬತ್ತದ ಸೆಲೆಯಂತೆ
ಕತ್ತಲು ಒತ್ತಲಾದಾಗಿನ ಪಿಸುಮಾತು
ಆಡಿದವರೆದೆಯೊಳಗೆ ಹೂರಣದಂತೆ
ಮುಪ್ಪಿನಲ್ಲಾಡುವ ಪ್ರಯತ್ನ ಪೂರ್ವಕ ಮಾತು
ಯಾರಿಗೂ ಹಿಡಿಸದ ಹಾಗಲಕಾಯಿಯಂತೆ
ಕೆಲವರಾಡುವ ಕರ್ಣಕಠೋರ ಮಾತು
ಕೇಳುವರ ಎದೆಗೆ ನಾಟಿತ್ತು.
ಹದಿಹರೆಯದಲ್ಲಿ ಅಪ್ಪ ಹೇಳಿದ ಮಾತು
ಅವಳ ಮಾತಿಗಿಂತ ಸಪ್ಪೆಯಾಗಿತ್ತು.
ಹೌದು ಈ ಮಾತುಗಳೇ ಹೀಗೆ ಮೌನ ಮುರಿಯುತ್ತವೆ
ಎದೆ ಬಿರಿಯುತ್ತವೆ.
ಸ್ಮೃತಿಪಟಲದಿ ಸದ್ದಿಲ್ಲದೇ ಅಡಗಿಸಿಕೊಳ್ಳುತ್ತವೆ.
ಹಸಿದ ಹೊಟ್ಟೆ ಖಾಲಿ ತಟ್ಟೆ
ಮೈಕೊರೆವ ಛಳಿಯಲಿ

ಅವ್ವನ ಬಿಸಿಗೈ ಮೈಮೇಲಾಡಿಸುತ್ತ
ಹೊರಗೆಡವಿದ ಮಾತು
ಅವ್ಯಕ್ತ ಸ್ಪಂದನದ ಮೌನದಾ ಮಾತು
ಬೆಲೆಕಟ್ಟುವುದುಂಟೆ?
ಕೆಲವು ಮಾತು ರೈಲು ಹೊರಟಂತೆ
ಚಹ ಗುಟುಕರಿಸಿದರೂ ಸಿಲ್ಲದ ತಲೆನೋವಿನಂತೆ
ಕೆಲಮಾತುಗಳು
ಹಸಿಗೋಡೆಯೊಳು ಹಳ್ಳು ಎಸೆದಂತೆ
ಮಾತಿಗೊಂದು ಮಿತಿ ಬೇಕು
ಮತಿವಂತರ ಮಿದುಮಾತು
ಎದೆಹೊಕ್ಕು ಹರುಷತರುವವು
ಮಾತು ಬೇಕು ಮನುಜಗೆ
ಮೌನದ ಎದೆ ಹೊಡೆದು
ಎದೆಯೊಳಗಿನ ನೋವು
ಹಂಚಿಕೊಳ್ಳಲು
ಹರುಷದ ಕ್ಷಣಗಳ ಸಂಜಿಕೊಳಲು

* * *

ನಮ್ಮೂರಲಿ-ಬದುಕಿರಬಹುದಾದವರು

ಕೆರೆಯನ್ನ ಕಟ್ಟಿ ಹಾರವರಿಗೆ ಕೊಟ್ಟು
ಉರಿಬಿಸಿಲಲಿ ಬೆಂದ ಬೆಂಡಾಗಿ
ಬೆಂಕಿ ಉಂಡೆಯಾದ ಡಾಂಬರ ರಸ್ತೆಗೆ ಸುರುವಿ
ದೌಳೇರ ವಾಹನಗಳಿಗೆ ದಾರಿ ಮಾಡಿಕೊಟ್ಟ
ನಾಳೆಗಾಗಿ ಕಾಯುತ್ತ ಬದುಕಿದ್ದಾರೆ ಕೆಲವರು ನಮ್ಮೂರಲಿ

ಭಟ್ಟಿ ಹೊತ್ತಿಸಿ ರಟ್ಟೆ ಮುರಿದು ದುಡಿದರೂ
ತುಂಬದು ಪಾಪಿ ಹೊಟ್ಟೆ,
ಮುಂಗಾರು-ಹಿಂಗಾರು ಬಡಿದಾಡಿದರೂ
ಉಣಲಿಲ್ಲಾ-ಉಡಲಿಲ್ಲಾ
ಹಿಂದೆ ಕೊಟ್ಟವನ ಗಂಟಿಗಾಗಿ ಹೊಂಟೇಬಿಟ್ಟ

ತಲೆ ಮೇಲಿನ ಕಾಫಿ ಬೀಜದ ಹೊರೆ
ಸಾಲಕ್ಕಿಂತ ಎಷ್ಟೊಂದು ಹಗುರ
ದುಡಿದರೂ ತೀರದ ಬಡ್ಡಿ
ಬಾಯಿಗಿಲ್ಲ ನಾಲ್ಕಾಣೆ ತಂಬಾಕು
ಉಂಡವರ ಮುಖ ನೋಡಿ ನಕ್ಕವರು

ತಂಗಳುಂಡು ಸತ್ತ ಹುಡುಗ
ಸಾವುಕಾರನ ಜೀತದಲ್ಲಿ
ಮೂರು ಬಾಟಲಿ ಹೆಂಡಕ್ಕೆ
ಸಮಾಪ್ತಿಯಾಯ್ತು ಲೆಕ್ಕಾಚಾರ
ಮತ್ತೆ ನಾಲ್ಕು ಮಕ್ಕಳುಂಟೆಂಬುದೆ ತೃಪ್ತಿ

ಹೃದಯ ತೂತಾಗಿ ನನ್ನಕ್ಕ ಸತ್ತಾಗ
ನೆನಪಾದದ್ದು ನಮ್ಮ ನೇತಾರರು
ಕೆಮ್ಮಿದರೂ ವಿಮಾನದಲ್ಲಿ
ಅಮೇರಿಕಕ್ಕೆ ಹಾರುವವರು
ನಮ್ಮೂರಿನವರೂ ಇದ ಯೋಚಿಸಲಾರರು.

* * *

ಕಪ್ಪು ಹೃದಯದ ಬಿಳಿ ಹುಡುಗಿಯರು

ಸೂರ್ಯನೂ ಒಮ್ಮೊಮ್ಮೆ ನಾಚಿಕೊಂಡು
ಮೋಡದೊಳಗೆ ಸರಿಯುತ್ತಾನೆ
ಬಿಳಿತೊಗಲಿನ ಬಿನ್ನಾಣಗಿತ್ತಿರ ಕಂಡು

ಭೂಮಿಯ ಮೇಲೆ ಕಾಲಿಡದೆ
ಸ್ವರ್ಗದಲ್ಲೇ ತೇಲಾಡುತ್ತಾರೆ.
ಕಂಡವರ ಎದೆಗುಂಡಿಗೆ ಬಡಿತ ಹೆಚ್ಚಿಸಿ

ನಮ್ಮೂರ ಕರಿ ಹುಡುಗರು
ಬಿಳಿದೊಗಲ ಕಂಡು ಜೊಲ್ಲು ಸುರಿಸಿ
ಜಾರಿ ಬಿದ್ದು ಬೋಲ್ಡಾಗಿ ಬಿಡುತ್ತಾರೆ.

ಅಂದವೇ ಬಂಡವಾಳ ಇವರಿಗೆ
ತಲೆಯೊಳಗೆ ಜೇಡಿ ಮಣ್ಣು
ಹೃದಯವಂತಿಕೆ ಇಲ್ಲದವರು

ಹೈದರ ಕಂಡು ಮುಲಕಾಡುತ್ತಾರೆ
ಮೂಗು ಮುರಿಯುತ್ತಾರೆ
ದೂಷಿಸಿ ದೂರ ನೂಕುತ್ತಾರೆ.

ಬಿಳಿ ಹುಡುಗಿ ದುಂಬಾಲು ಬಿದ್ದು
ಸಾಲಿ ಬಿಟ್ಟ ಸಂಕ್ರು
ಕರಿಯ ಖದೀಮ

* * *

ಅವ್ವ ಕಲಿಸಿದ ಹಾಡು

ಹಸಿದ ಹೊಟ್ಟೆ ಕಸವಿನರವಿಟ್ಟೆ
ಕನಸು ಕಾಣಬೇಡ ಮಗ
ಕನಸಿಂದೇನಾಗದೆಂದು
ಬದುಕಿನಾರಂಭಕ್ಕೆ ಅವ್ವ ಕಲಿಸಿದ್ದಳು

ಅಂದಿನ ಆ ಹಾಡಿಗೂ ಇಂದಿನ ಬದುಕಿಗೂ
ತಾಳೆ ಹಾಕುತ್ತಿದ್ದೇನೆ
ನನ್ನಲ್ಲಿಲ್ಲದ ಸಂಪತ್ತಿಗೆ
ಪರಿಪರಿಯಾಗಿ ಪರದಾಡುವಾಗ

ಅವ್ವನ ಹಾಡು ಹಾಡಿದ್ದೆ
ರಟ್ಟೆಯಾಡುವುದು ನೀತಾಗಿನ ಅವಳ ಕ್ರಿಯೆ
ಕಂಬನಿ ತಂದಿತ್ತೆನಗೆ
ನಿಷ್ಕ್ರಿಯಳಾಗಿ ಶೂನ್ಯದೊಡನೆ ಮಾತಾಡುತ್ತಿದ್ದಳು ಅವ್ವ

ಬದುಕಿನ ಗುದ್ದಾಟದಲಿ ಸೋತು
ನನಗೊಂದು ಸವಾಲಾಗಿ ಮಲಗಿದ್ದಾಳೆ
ಅವ್ವ ಕಲಿಸಿದ ಹಾಡು
ನೆನಪು ಮಾಡಿಕೊಳ್ಳುತ್ತಿರುವೆ ಬಹಳ ದಿನಗಳಿಂದ

* * *

ಮೀನು ಮತ್ತು ಹುಡುಗಿ

ಸಾಗರದೊಳಗೆ
ಸ್ವಚ್ಛಂದವಾಗಿ ಬದುಕಿದ್ದ ಮೀನು
ಸತ್ತು ತನ್ನ ಪುಟ್ಟಿಯೊಳಗೆ ಬಿದ್ದಿರುವುದನ್ನು
ಹುಡುಗಿ ವಿಚಾರಮಾಡುವುದಿಲ್ಲಾ

ಕೊರಳ ತುಂಬಿ ಹಳದಿಲೋಹ ತೊಟ್ಟವಳು
ಮೂಗು ಮುಚ್ಚಿಕೊಂಡೆ ಕೇಳಿದಾಗ
ಪ್ಲಾಸ್ಟಿಕ್ ಖೊಟ್ಟಿಗೆ ಹಾಕಿ
ಅವಳು ಕೊಟ್ಟ ಹತ್ತರ ನೋಟಿನ ಹಿಂದೆ ನಿಟ್ಟುಸಿರು ಬಿಡುತ್ತಾಳೆ

ಎಷ್ಟೋ ನೋಟುಗಳು ಮುದುಡಿ ಮುದ್ದೆಯಾದವು
ಬಲೆ ಎಳೆದ ಬಂಧುಗಳಿಗೆ
ದಣಿವಿನ ತಾಣವಾಗಿ
ಮತ್ತದೇ ಹಳದೀ ಲೋಹಗಳ ಸ್ವತ್ತಾಗುತ್ತವೆ

ಸತ್ತ ಮೀನುರಾಶಿ ಕರಗಿದಂತೆ
ಇನ್ನೂ ಉಸಿರಾಡುತ್ತಿರುವ ತನ್ನೊಳಗೆ ಇಣುಕುತ್ತಾಳೆ
ಪುಟ್ಟಿ–ಮೀನು–ತಾನು–ನಿಶ್ಚಿತ
ಬಾಲ್ಯದಾಟಿ ಯೌವ್ವನ ಜಾರುತ್ತಿರುವುದು ಖಚಿತ

ಸತ್ತ ಮೀನಿಗಿರುವಷ್ಟು ಬೆಲೆ
ತನಗಿಲ್ಲವೆಂದು ತಿಳಿದಾಗ
ಬಿಕ್ಕುತ್ತಾಳೆ,
ಬದುಕಿದಾಗ ಹೋರಾಡುತ್ತಾಳೆ

ಗೌಜು ಗದ್ದಲದಲ್ಲೂ ಏಕಾಂತದ ಅನುಭವ
ಚಿಪ್ಪು–ಮೀನು–ಏಡಿಗಳರಾಶಿ ಪಕ್ಕ
ಹಳಹಳಿಸುತ್ತಾಳೆ,
ಹರೆಯ ಸೋರಿ ಹೋಗುತ್ತಿರುವದ ಕಂಡು

* * *

ಪಾಲು ಮತ್ತು ಮುದುಕ

ಮುದುಕ ನಗುತ್ತಿದ್ದ ಮನದೊಳಗೆ
ಕೂಡಿಟ್ಟ ಕನಸುಗಳ ಹಂಚಿಕೊಳ್ಳುತ್ತಿರುವ ಮಕ್ಕಳ ಕಂಡು
ಆ ಹೊಲ, ಮನೆ, ರಂಟೆ, ಕುಂಟೆ ಉಳದಿದ್ದೇನು ?
ಅವನುಟ್ಟ ಲಂಡಂಗಿ ತುಂಡು ಪಂಚೆ.

ಛಲದಂಕ ಮಲ್ಲನಂತೆ ಹೊತ್ತು ಮೂಡುವ ಮುನ್ನ
ಹೊರೆ ಹೊತ್ತು ಗಳಿಸಿ ಉಳಿಸಿ
ಒಂದೊಂದಾಗೆ ಜೋಡಿಸಿ ಕಟ್ಟಿದ್ದು
ಒಂದೊಮ್ಮೆ ಕುಸಿದ ಕಸರತ್ತು.

ಪಾಲಿಗಾಗಿ ಪರಿದಾಡುತ್ತಿರುವ ಅವನ ಸಂತತಿ
ಕೈಗೆ ಕೈ ಮಿಲಾಯಿಸಿ ಹೊಡೆದಾಡುತ್ತಿರಲು
ಮೌನಿಯಾಗೆ ವೀಕ್ಷಿಸತೊಡಗಿದ
ಮುಸಿಮುಸಿ ಅಳುತ್ತಿರುವ ಹೆಂಡತಿ ಗೋಜಿಗೂ ಹೋಗದೆ

ಮೀಸೆ ಹುರಿಮಾಡುತ, ಕಂಚಿನ ತಟ್ಟೆ ಬಡಿದು
ಜಗ ಜಾಹಿರಾತು ಮಾಡಿ,
ಬೆಲ್ಲ ಹಂಚಿದ ದಿನ ನೆನಪಾತು
ಬೆಳೆದಂತೆ ದಾಯಾದಿಗಳಾದ ಮಕ್ಕಳ ಪರಿ.

ಅವನಪ್ಪನ ಎದೆಯುಂಗಿ ಹಿಡಿದು
ಹಕ್ಕು ಕೊಡೆಂದು ಕೇಳಿದ್ದು, ಪುನರಾವರ್ತನೆ
ತನ್ನ ಮಕ್ಕಳಿಗಾಗಿ ಕಡಿದು ಬಾಚಿ ಸೇರಿಸಿ
ಸಾವರಿಸಿಕೊಳ್ಳುತ್ತಿರುವಾಗಲೆ ಹಕ್ಕಿಗಾಗಿ ಹೊಡೆದಾಟ.

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ
ರೇಡಿಯೊದೊಳಗಿನ ಹಾಡು ಕಿವಿಯೊಳಗೆ ಗುಂಯ್‌ಗುಟ್ಟತೊಡಗಿತು.
ಬರಲಿರುವ ಭಯಾನಕ ದಿನಗಳು
ಭೂತವಾಗೆ ಕಾಡತೊಡಗಿದ್ದವು ಬೆನ್ನು ಬಿಡದಂತೆ

ತುತ್ತು ಕೂಳಿಗೆ ಬಾಲಬಡೆವ ನಾಯಂತೆ
ಆದೀತೆನ್ನಯ ಪಾಡೆಂದು
ಮುಖ ಮುಚ್ಚಿ ಮನಬಿಚ್ಚಿ
ಅತ್ತು ಅತ್ತು ಹಗುರಾದ ಜಡದೇಹ ಭೂಮಿಗೆ ಕೆಡಹಿ.

* * *

ಸ್ಥಿತಿ ನೆಲೆ ಹಾದಿ

ಮುಂಗಾರು ಮೋಡಕ್ಕೆ ಮೈಯೊಡ್ಡಿ ತೋಯುತ್ತಾ
ರಾಡಿ ನೀರೊಳಗೆ ಬಿಟ್ಟ ದೋಣಿ
ಉಸುಕಿನೊಳಗೆ ಪಾದವನಿಟ್ಟು
ಗುಬ್ಬಿಮನೆ ಕಟ್ಟಿ ಪಟ್ಟ ಖುಷಿ
ಮರಕೋತಿ ಆಟ ಆಡುತ್ತಾ
ಅಡವಿಯೆಲ್ಲಾ ತಿರುಗಾಡಿ
ಅಜ್ಜನ ದೇಹ ಸುಟ್ಟುಳಿದ ಎಲವ ಹಿಡಿದು
ಉಕ್ಕಿದ ದುಃಖ ವಾಸ್ತವದ ಸ್ಥಿತಿ.

ರಾಗಿ ಗಂಜಿಯೊಂದಿಗೆ ನೆಂಜಿಕೊಳ್ಳಲಿಲ್ಲದೆ
ಕೆಟ್ಟ ನಾಲಿಗೆಗೆ ಮತ್ತೆಂದಾದರೂ ಸಿಕ್ಕೀತು ಹುರಳಿ
ಸೈಕಲಿನ ಹಳೆ ಟಾಯರ್ ಉರುಳಿಸುತ್ತಾ ಓಡಿದವರಿಗೆ
ಹೊಳೆದದ್ದು
ಓತಿಕಾಟವ ಕೊಂದು ಬಾಯಿಗೆ ಕೀಲೆಣ್ಣೆ ತುರುಕಿ
ಹೂತರಾಗುವುದಯ್ಯ ಹತ್ತುಪೈಸಾ
ಖಾಲಿಯಾದವು ಬೇಲಿ ಹತ್ತು ಪೈಸೆಯಾಸೆಗೆ
ಹುದುಲೊಳಗೆ, ಮೀನಿಗಾಗಿ ಮಣ್ಣುಮುದ್ದೆಯು ಹಿಚುಕಿ
ನಿರಾಶೆಗೊಂಡದ್ದು–ನೈಜತೆಯು ನೆಲೆ.

ಮೋಟಾರು ಬೈಕನ್ನ ತಂದವ ಕಂಡೊಡನೆ
ನನ್ನ ಕಡೆ ನೋಡಿ ಕಿಸಕ್ ಎಂದು ನಕ್ಕು
ಸರಕ್ಕನೆ ಅಂಡನೆತ್ತಿಟ್ಟು ಕುಳಿತು ಪುರ್ರೆಂದು ಪುರ್ಲಿಯಂತೆ
ಹಾರಿಹೋದದನ್ನ ಕಂಡು ಸೋಜಿಗಪಡುತ್ತ
ಇಲ್ಲಿ ದಿನಕ್ಕಾಗಿ ಎಲ್ಲಿಲ್ಲದ ಅಸಮಾಧಾನ.

ಇದು ಯಾಕೆ ಹೀಗೆ ?
ಒಬ್ಬ ಮೆರೆಯುವವ
ಒಬ್ಬ ದುಡಿಯುವವ
ಒಬ್ಬ ಪರದಾಡುವವ
ಎಲ್ಲವುದರ ಮೂಲ ಒಂದೇ, ಆದರೂ ಯಾಕೀ ಭಿನ್ನತೆ ?
ಸತ್ಯಾನ್ವೇಷಣೆಯ ಹಾದಿ....

* * *

ನನ್ನೊಳಗಿನ ಅವಳ ಪದ್ಯ

ಒಂದಿನ ನನ್ನವಳು ಜಗಳ ತಗೊಂಡೇ ಬಂದ್ಲು
ಅಲ್ರೀ ನೀವು ಎಲ್ಲಾರ ಮ್ಯಾಲ ಪದ್ಯ ಬರೀತಿರಿ
ಮತ್ತ ನನ್ನ ಮ್ಯಾಲ ಯಾಕ ಬರಿಯಂಗಿಲ್ಲಾಂತ
ಹಲ್ಲಗಿಂಜುತ್ತಾ ಕಾಲಬೆಳ್ಳಿಂದ ನೆಲದಾಗ ಗೆರಿ ತೆಗಿಯಾತೊಡಗಿದ್ಲು.

ಗುಟ್ಟು ರಟ್ಟಾತಲೇ ಅಂದವನೇ,
ತಡವರಿಸುತ್ತಲೇ,
ಎ....ಎ.... ನಾ ಯಾರಮ್ಯಾಲ ಬರದೀನಿ ಮರಾಯ್ತಿ ಅಂದೆ
ನಂಗ ಗೊತ್ತಾಗೈತಿ ನಿಮ್ದೆಲ್ಲಾ
ಹಳ್ಳೆಣ್ಣಿ ಕುಡಿದೋರಗತಿ ಮಕಮಾಡಿ ಕುಂತೆ.

ಪಕ್ಕದ ಮನಿಯಾಕಿ ನಿಮ್ಮನ್ನ ನೋಡಿ ಹಲ್ಲಕಿರದ್ಲು ಅಂತ
ಆಕಿ ಹಲ್ಲಿನ ಮ್ಯಾಲ ಬರದದ್ದು,
ಹಿಂದಿನ ಮನಿಯಾಕಿ ನಿಮ್ಮನ್ನೋಡಿ ಕಣ್ಣು ಮಿಟಿಕಿಸಿದ್ಕ
ಕಣ್ಣಿನ ಮ್ಯಾಲ ಬರದದ್ದು.

ಬೆಂಗಳೂರಿಗಂತ ಹೋದಾಗ ಕಬ್ಬನ ಪಾರ್ಕಿನ್ಯಾಗ ಕಂಡೊಳ ಮ್ಯಾಲ
ಹಾಸನಕ್ಕಂತ ಹೋಗಿ ಬರದದ್ದು
ಒಂದಾ, ಎಲ್ಡ, ನಿಮ್ಮ ಪದ್ಯಾನೆಲ್ಲಾ ಓದೀನಿ....
ಬೆವರು ಕಿತ್ತು ಅಂಗಿ ಒದ್ದೆಯಾಗಿತ್ತು, ಫ್ಯಾನ್ ಅಂತ ಕಿರಲಿದೆ,
ಕೃಷ್ಣ ನೆಪ್ಪಾದ ಎನ ಜಾಸಗೇಡಿ ಮಾಡಿದ್ರು ದೇವರಾದಿ
ಚಂದನೋಡಿ ಬರಿಯಾಕ ಹೋದ್ರ ಮೈಮಾಲ ಬರಾಕಹತ್ತು
ನನ್ನೊಳಗೆ ಮಾತಾಡ್ತಿದ್ದೆ
ನೀವು ಏನಾರ ಬರಿಲಿಲ್ಲಾಂದ್ರ ನೋಡ್ರಿ ಅಂತ ಗುಟುರ್ ಹಾಕಿದ್ಲು

ಅಯ್ಯೊ ನಿಲ್ಲು.... ಬರೀತೀನಿ ಅಂತ ಯೋಚ್ನೆ ಮಾಡ್ದೆ.
ಅಲ್ಲಾ ನಿನ್ನ ಯಾವ ಅಂಗದ ಮ್ಯಾಲ ಬರೀಲಿ ಹೇಳು,
ಎಲ್ಲಾ ನೋಡಿದ್ರ ಮಂಗ್ಯಾನಂಗ ಅದಾವು....
ಏನಂದ್ರಿ, ಚೀರಾಡಿದಳು....
ಅಲ್ಲಾ ಎಲ್ಲಾನೂ ಒಂದಕ್ಕಿಂತ ಒಂದು ಚಂದ ಅದಾವು ಅಂದೆ.

ಹಂಗಾರ ಹಿಂಗ ಮಾಡ್ರಿ, ಮಕದ ಮ್ಯಾಲೊಂದು
ಮೂಗಿನಮ್ಯಾಲ, ಕಣ್ಣಿನಮ್ಯಾಲ ಅಂತ
ದಿನನಿತ್ಯದ ದಿನಸಿನ ಲೀಸ್ಟ್ ಹಂಗ
ಉದ್ದನೆ ಪಟ್ಟಿ ಕೊಟ್ಟಳು, ಕವನ ಬರಿಲೋ
ಪಟ್ಟಿ ಓದಿ ಪ್ಯಾಟೀಗ ಹೋಗಲಿ, ರಾಗ ಎಳದೆ
ಹೂಂ.... ನಾ ಹ್ಯಾಂಗ ಚೆಂದ ಕಂಡೇನು ನಿಮಗ,

ಮೂಲಿಮನಿ ಮಾಲತಿ, ಬೆಂಗಳೂರ ಭಾರತಿ
ಹಾಸನದ ಆರತಿ ಹೂಂ....
ಗಂಟುಮೂರಿ ಹಾಕ್ಕೊಂಡು ಹೊಂಟೆಬಿಟ್ಟಳು
ಪಾಪ, ಜೀವನಾದಾಗ ಜೀವ ಹಿಂಡೋ
ಅಲ್ಲಾ ಜೀವ ಕೊಡೊ ಜೀವಿ ಅಲ್ವಾ
ಎಂದು ಪೆನ್ನ ಹಿಡಿದು ಘನಘೋರ ವಿಚಾರ ಮಾಡ್ತಾ ಕುಂತೆ.

ಅಪ್ಪಾ ಅಂದವನೆ ಬಂದ,
ಅವಳ ಮುದ್ದಿನ ಮಗ ಅನಿಕೇತ.
ಎ, ಅವರು ಪದ್ಯಾ ಬರಿಯಾಕ ಕುಂತಾರ
ಶಿವನ ತಡೆದ ಗಣಪತಿಯಂತೆ ತಡೆದಳು
ನಾ ಹೋಗಲೇಬೇಕು ಅಮ್ಮ– ರಾಗ ಎಳದ,
ಬ್ಯಾಡ ಅಂದಳವಳು.
ವಾದ ವಿವಾದಗಳ ನಡುವೆ out ಆಯಿತು Mood.
ಅನಿ ಬಾ ಮರಿ ಎಂದೆ ಪೆನ್ನು ಬಿಸಾಕಿ.
ನಿಮಗ ಅವನೆ ಹೆಚ್ಚು,
ನಾ ಅಂದ್ರ ಕಾಸಿನ ಕಿಮ್ಮತ್ತಿಲ್ಲ ಈ ಮನೆಯೊಳಗ
ಮೂತಿ ತಿರುವಿ ಹೊಂಟೆಬಿಟ್ಟಳು.
ನನ್ನವಳ ಪದ್ಯ....
ನನ್ನ ಎದೆಯೊಳಗೆ ಉಳಿಯಿತು
ಹೊರಹಾಕಲು ಹವಣಿಸುತ್ತಿದ್ದೇನೆ.
ಹವಣಿಸುತ್ತಲೇ ಇದ್ದೇನೆ....

* * *

ಚಂದ್ರನ ಮ್ಯಾಲೆ Strike

ನಾನು ಕೂಗುತ್ತಿದ್ದೆ ಘೋಷಣೆ,
Go back ಚಂದ್ರ Go back ಚಂದ್ರ ಅಂತ
ತುಡುಗ ಚಂದ್ರ ನನ್ನವಳ ಒಲವನ್ನ ನನ್ನಿಂದ ಕಿತ್ತುಕೊಂಡಿದ್ದ
ತಂಗಾಳಿಗಿಂತ ಹೊರಗ ಬಂದ್ರ ಬರಿ ಅವನವೆ ಹೊಗಳಿಕೆ ಅವಳಿಂದ.

ಪಕ್ಕದ ಮನೆಯ ಹುಡುಗಿ ತುಡುಗಿಲೆ
ಅವನ ಗೆಳೆಯನ ಕೂಡಿದರೆ ಅವಳ ಬಾಯೊಳಗೆ ಅವನವೇ ಮಾತುಗಳು
ಅವನು ನಿನ್ನ ಹೆಸರಲ್ಲಿ ಬೊಬ್ಬೆಹೊಡೆಯುತೊಡಗಿದ
ನೀ ಬಹಳ ಕೆಟ್ಟ ಅದಿ ಮಹರಾಯ.

ಅಲ್ಲಾ ಒಮ್ಮೆ ಅರ್ಧ ಇರ್ತಿ
ಮತ್ತೊಮ್ಮೆ ಪೂರಾ
ಪೂರ್ಣಿಮೆಯ ದಿನ ಪೂರ್ತಿ ಬರೋನು ಹಿಂಗ ಕಾಡತಿ
ದಿನ ಬಂದಿದ್ದೆ ಅಂದ್ರ ವಜ್ಜಿ ಇತ್ತ ನೋಡು

ಉಕ್ಕುವ ಸಾಗರಕ್ಕೆ ನಿನ್ನದೆ ಸ್ಫೂರ್ತಿ
ಬೆಚ್ಚನೆಯ ಶೋಭಾಯಮಾನ ಶುಭ್ರ ಚಂದ್ರ
ಹದಿಹರೆಯದ ಹೃದಯಕ್ಕೆ ಲಗ್ಗೆ ಇಟ್ಟೆ ಅಂದ್ರ
ಹುಡುಗರ ಗತಿ ಏನು ? ಯೋಚಿಸಿ ಏನು ಯಾವಾಗಾರ.

ನಿನ್ನೊಳಗಿನ ಮರ
ಮರದ ಕೆಳಗಿನ ಮುದುಕಿ ಖರೇನ ಹೌದೇನು ?
ಕಳಸು ಮುದುಕಿಯನ್ನ ಯಾಕ ಇಟ್ಕೊಂಡಿ
ನಮ್ಮ ದನ ಕಾಯಾಕ ಯಾರು ಇಲ್ಲಾ.

ತುಡುಗ ಚಂದ್ರ ಮುಂಗುರುಳ ಸರಿಸಿ
ಮುತ್ತಿಟ್ಟು ಮಾಯ ಆದಿ
ನಾ ಎಟ ದಿನಗಳಾದ್ವು ಆಕೀನ ಹಿಡಸಾಕ ಹತ್ತಿ
ಬರಿ Post Phone ಮಾಡಾಕ ಹತ್ಯಾಳ ನೀನೆ Lucky.

* * *

ಟ್ರಂಕ್ ಮತ್ತು ಇತಿಹಾಸ

ಅವ್ವನ ಹರಕು ಸೀರೆ,
ಅಪ್ಪನ ತಾತಾನೂತೂತಾದ ಧೋತರ
ಉಡಲು ಬಾರದ ನನ್ನ ಹಳೆ ಅಂಗಿ
ಒಂದಿಷ್ಟು ಹರಕು ಅರವಿ
ಯಾವ ಕಾಲದ್ದೊ ನುಸಿಮುಟ್ಟಿ
ಹಿಡಿದರೆ ತರಗಲೆಲೆಯಂತೆ ಕರಕರ ಸದ್ದುಮಾಡಿ
ಉದುರಿ ಹೋಗುವ ಒಂದೇ ಒಂದು ಪುಸ್ತಕ
ಅಪ್ಪನಿಗೂ ತಿಳಿಯದು ಅದರ ಇತಿಹಾಸ
ರಕ್ಷಣೆ ಪಡೆಯುತ್ತಿವೆ ಟ್ರಂಕ್ ಎಂಬ ತಗಡಿನ ಡಬ್ಬದಲ್ಲಿ

ಚಿಲಕ ಬಿಡಿಸಿದರೆ ಸುರುಮಾಡುವುದು ಕಿರಲಸದ್ಧು
ಮೇಲೆತ್ತಿದ್ದರೆ ಯಾರೋ ಸತ್ತರೆಂಬಂತೆ ಶೋಕ
ಅವ್ವಗೊಬ್ಬಳಿಗೆ ಗೊತ್ತಿದ್ದ ಸತ್ಯ, ನಮಗೆ ತಿಳಿಯಲಿಲ್ಲ
ಸದ್ದು ಮಾಡದು ಈ ತಗಡಿನ ಸಂದೂಕವೆಂಬುದು.
ಸಿಕ್ಕ ಕೈಕಾಸು ಅರವಿಯೊಳಗೆ ಕಟ್ಟಿ
ಇಡಿಗಂಟು ಮಾಡಿ ಇಟ್ಟಿಹಳಂತೆ ಇದರೊಳಗೆ
ತಿಳಿದಿಲ್ಲ ಯಾರಿಗೂ ನಿಧಿಯ ರಹಸ್ಯ.

ಆರಡಿ ಗುಡಿಸಲೊಳಗೆ ಮೂರು ಮೇಕೆ ಮರಿ
ಒಂಬತ್ತು ಮಂದಿಯ ವಾಸ
ಅಲ್ಲವೆ ಮನುಕುಲದ ಪ್ರತೀಕ
ಕೊನೆಯುತ ಮಗ್ಗಲಾದೊಡನೆ
ಕೈಯೋ, ಕಾಲು ಬಡಿದು ದಡ್ ಬಡ್ ಸದ್ದು
ಏಳ್ರೋ ಕಳ್ಳರು ಬಂದರು ಎಂದು ಕೂಗಿದಂತೆ
ಕದ್ದವನಿಗೂ ನಾಚಿಕೆಯಾದೀತು ಇದ ಕಂಡು

ಅಪ್ಪನ ಅಜ್ಜನ ಅಜ್ಜನ ಕಾಲದ ಟ್ರೆಂಕು
ಮುರಿದ ನಾಕು ಮೂಲೆಗಳು
ಮೇಲೆ ಮುಚ್ಚಲೊಂದು ಮುಚ್ಚಳ
ಚಿಲಕ ಬೀಗ ಕಾಣದ ಬಿದ್ದಿದೆ
ಗೋರಿಯಾಕೃತಿ.
ಗುಡಿಸಲ ಮೂಲೆಯಲ್ಲಿ
ಮನೆ ಮರ್ಯಾದೆ ಮುಚ್ಚಿಡಲು ಇಹುದೊಂದೆ
ಪೂರ್ವಜರ ಪುಣ್ಯದ ಫಲ
ನಾನು–ನಮ್ಮಪ್ಪ ನನ್ನ ಮಗ
ಪ್ರೀತಿಸುತ್ತೇವೆ ಇದನ
ನಮ್ಮ ಇತಿಹಾಸದ ಪ್ರತೀಕವೆಂಬಂತೆ.

* * *

ಸಮಾನತೆ.... ಮತ್ತೊಂದಿಷ್ಟು

ನನ್ನ ಸಿಮೆಂಟಿನ ಮನೆ ಮೇಲೆ ಬೀಳುವ ಮಳೆ ಶಬ್ದ
ನಮ್ಮ ಗುಡಿಸಲಿನ ನೆನಪು ತರುತ್ತದೆ
ಅವ್ವನ ಸುತ್ತಲೂ ಒಣ ನೆಲದಲ್ಲಿ ಅವಿತುಕೊಂಡು
ಸುರಿಮಳೆ ಸೋರಿ ಒದ್ದೆಯಾದ ನೆಲ ನಿದ್ದೆ ಬಾರದ ಆ ರಾತ್ರಿ
ಗುಡುಗಿನಾರ್ಭಟ ಕೋಲ್‌ಮಿಂಚು
"ಓ ಅರ್ಜುನಾ ಇರ್ಲಿ ದಯಮಾಡು"
ಅವ್ವನ ಕೂಗು. ಹೊರಗಿಂದ ಒಳನುಗ್ಗಿ ನೆರಕಿ ಕಿತ್ತು
ಮನೆಯನ್ನ ಹಾರಿಸಿಕೊಂಡು ಹೋಗುವಂತೆ ಬೀಸಿತ್ತು.

ನನ್ನ ಹೆಂಡತಿ-ಮಕ್ಕಳನ್ನ ನೋಡಿದಾಗ
ಅಪ್ಪನ ಸುಕ್ಕುಗಟ್ಟಿದ ಕೆನ್ನೆ ಎಲುಬಿನ ಹಂದರವಾದ ಎದೆ ಗೂಡು
ಬದುಕಿಗಾಗಿ ಬಡಿದಾಡುತ್ತಿರುವ
ನನ್ನ ಒಡಹುಟ್ಟಿದವರು
ಚುಚ್ಚುತ್ತಾರೆ ಎದೆಯ
ನಾನು ಬದುಕಲಾಗದೆ ಅವರಿಗೂ ನೆರವಾಗದ
ನನ್ನ ನೌಕರಿಯ ಬಗ್ಗೆ ಜಿಗುಪ್ಸೆಯಾಗುತ್ತದೆ.

ಟಾರಿನ ಮೇಲೆ ಅಡ್ಡಾಡುವಾಗ
ಮಳೆ ಕೆಸರೊಳು ಕಾಲು ಹುದುಗಿದೊಡೆ
ಊರೊಳಗೆ ರೈತಾಪಿಗಳ ಚಕ್ಕಡಿ
ಹುದುಲೊಳಗೆ ಸಿಕ್ಕು ಹೊರಳಾಡಿದ್ದು
ನೆನಪಾಗುತ್ತದೆ.

ಹೌದು ಅದೇ ಬದುಕು ಅಂದು ನಾ ಬದುಕಿದ್ದು
ದೂರದಿಂದ ನೋಡುತ್ತೇನೆ,
ರಕ್ತದೊತ್ತಡ, ಹಾರ್ಟ್, ಸಿಹಿಮೂತ್ರ
ಆವರಿಸಿಕೊಂಡ ಸಿಟಿ ಜನರು
ತಿಂದು ತೇಗುತ್ತಾರೆ

ಉಣಲಿಲ್ಲದ ಹುಡುಗರು ಬೆರಗುಗಣ್ಣಿಂದ ನೋಡುತ್ತಾರೆ
ನಾನು ಮಾತ್ರ ನನ್ನ ಡಬ್ಬಲ್ ರೋಲ್ ನಟನೆ
ಸಾಕಾಗಿ, ಹೊಸ ಬದುಕಿನ ಆವಿಷ್ಕಾರಕ್ಕಾಗಿ ಕಾಯುತ್ತೇನೆ
ನನ್ನಂತ ನೂರು ಮಂದಿಗೆ ಸಮಪಾಲು ಸಿಕ್ಕ
ಸಮಾನ-ಮನಸು ಕಟ್ಟಲಿ ಸುಂದರ ಸಮಾಜವ.

* * *

ಚೆಲುವೆಯರಿಗೆ

ಓ ಹುಡುಗಿಯರೇ
ಹಿಡಿದುಬಿಡುತ್ತೀರಿ ಹುಡುಗರ ಜುಟ್ಟನ್ನ
ಜಟಿಲ ಪಾಪ
ಬಿಡುಗಡೆ ಹೊಂದುವುದು.

ಒಬ್ಬಳ ಕಣ್ಣಿಗೆ
ಮತ್ತೊಬ್ಬಳ ಬಣ್ಣಕ್ಕೆ
ಮಗದೊಬ್ಬಳ ಮುಗ್ಧತೆಗೆ
ಮಾರಿ ಹೋದರಿ ಭೂಪರು.

ಹಿಂಬರುವ ಪರಿಯನ್ನರಿಯದ
ಗೋಪಾಲರು
ಮುಳುಗಿ ಹೋಗಿಯರಿದೋ
ಮೋಹಪಾಶದಲಿ

ದಿಮಾಕಿನ ಹುಡುಗಿಯರೆ
ಡೌಲು ಮಾಡಬೇಡಿ ಚೆಲುವಿದೆ ಎಂದು
ಸೋರಿಹೋದೀತು ಅಂದ ನಾಳೆಯೊಳಗೆ
ಖಾಲಿ ಆಮೇಲೆ ನೀವು ನಿತ್ಯ ಜವ್ವನೆಯರಂತೆ.

ಎದೆಯೊಳಗಿರಲಿ ಚೆಲುವು
ತನುವಿನ ತುಂಬ ಒಲವು
ಹೈದರೆದೆ ತಾಳಕೆ ಕುಣಿಯದೆ
ಕಾಡಿ ಬೇಡಿ ಅವರ ಪ್ರೀತಿಗೆ ಹಲಬುವ ಪಾಮರರ.

* * *

ಅರ್ಥಸಚಿವನ ಅನರ್ಥರೇಖೆಗಳು

ಮೇಲೆ ಕೆಳಗೆ ಉದ್ದ ಅಗಲ
ಸಂದಿಗೊಂದಿಗಳ ನಡುವೆಯಿಂದ ಹಾದು ಹೋಗುತ್ತವೆ ರೇಖೆಗಳು
ಅರ್ಥಶಾಸ್ತ್ರಜ್ಞರು, ವಿಜ್ಞಾನಿ–ಅಜ್ಞಾನಿಗಳೆಲ್ಲಾ
ಎಳೆದೆಳೆದು ಹನುಮಪ್ಪನ ತೇರಿನಂತೆ
ಅದೋ ಮಾಡಿದರೊಂದು ದುಡ್ಡಿನ ರೇಖೆ.

ಬಂದ ನೋಡಿ ನಮ್ಮ ಓವರ್ ಕೋಟ್ ಅರ್ಥಸಚಿವ
ತಲೆಯೊಳಗೆ ಮಿದುಳಿಲ್ಲದಿದ್ದರೇನು
ಸಿಂಹನೀತನೂ ಪತ್ರಿಕೆಗಳೊಳಗೆ
ಈತನಿಟ್ಟ ವಿವರ ಹೀಗಿದೆ,

ಮೇಲಿನವರು ಮಾನವರು ಬನಿಯಾ ಬ್ರಾಹ್ಮಣೋಪಾದಿಯಾಗಿ
ಇವರ ಕೈಗೆ ಕೊಡಿ ನಾಲ್ಕು ಫ್ಯಾಕ್ಟರಿ
ಉಳಿದ ದೇಶದ ಅಧಿಕಾರ
ಗೆರೆಯ ಕೆಳಗಿನವರು ಬಡವರು
ಕೊಡಿ ಕೈಯಲಿ ಚಿಪ್ಪು ಬೇಡಲಿ ಭಿಕ್ಷೆ.

ನಡುವಿನವರ್‍ಯಾರಯ್ಯ ದನಕಾಯುವ ದ್ಯಾಮಣ್ಣ
ಅಯ್ಯೋ ಅಷ್ಟು ತಿಳಿಯದೋ ತಮ್ಮಾ
ತ್ರಿಶಂಕುಗಳು ಮಧ್ಯಮರು.
ಮೇಲೆ ಕೆಳಗೆ ಬಾಯಿಬಿಟ್ಟು
ಯಾವಾನಿಗಾದ್ರು ಟೋಪಿ ಹಾಕಿ ಚೇನಾದ ಸ್ಕೂಟರ್
ಕೊಳ್ಳಲು ಕಾಯುತಿಹರು.

ಅರ್ಥಮಂತ್ರಿ ಬಜೆಟ್ ನೋಡಿ ಸುಸ್ತಾಗಿ
ಕಿಸೆ ತಡಕಾಡುತಿಹರು ಕೊರಿಬೀಡಿಗಾಗಿ
ಅದು ಸಿಗದಿರೆ, ಕಾಸಿಗಾಗಿ ತಡಕಾಡಿ ಸುಸ್ತಾಗಿ
ಟೀವಿ ಮುಂದೆ ಕುಂತು ರೇಖೆಗಳನ್ನೆ ದಿಟ್ಟಿಸುತ್ತಾರೆ
ತಲೆ ಕೆರೆದು ಹಾಲಿಲ್ಲದ ಡಿಕಾಕ್ಷ್ಯನ್ ಹೀರಿ
ನಿಟ್ಟುಸಿರು ಬಿಡುತ್ತಾರೆ

ಅರ್ಥವಾಗದ ವ್ಯರ್ಥರೇಖೆಗಳು
ಕಾಡುತ್ತವೆ ಇರುಳ ಕನಸಂತೆ.
ಡೊಳ್ಳು ಹೊಟ್ಟೆಯ ಲೀಡರ ಜುಬ್ಬದ ಜೋಬಿಗೆ
ಇಳಿಸುತ್ತಾನೆ ಬೆವರ ಫಲ.
ಮುಚ್ಚಿ ಕಂಪನಿ ಬಾಗಿಲು ಹೊರಗಟ್ಟುತ್ತಾನೆ ಜನರ
Multi national company ಜೊತೆಗೂಡಿ

ಅಗೋ ಅಲ್ಲಿ ನೋಡಿ,
ಹೇಗೆ ಕಳಚಿದ್ದಾರೆ ರೈತಣ್ಣನ ಧೋತರ,
ತಡ ಯಾಕೋ ರೈತಣ್ಣ ಬಿಗಿದುಕೋ ಉರಲು
ಅರ್ಥ ಆಗುವುದಿಲ್ಲ ನಿನಗೆ ರೇಖೆಗಳ ಲೀಲೆ.
ಆದರೂ ಮೆಚ್ಚುತ್ತಾನೆ ಆತ
ಹೊಣೆಗೇಡಿಯ ಹೊಣೆಗಾರಿಕೆ
ಅರ್ಥವಾಗದೆ, ಎನ್ ಗೆರಿಗಳಪ್ಪ ಅಬ್ಬಾ,
ಅಂದು ಬೆರಗಾಗಿ ಬೆರಳಿಡುತ್ತಾರೆ ಬಾಯಿ ಮೇಲೆ.

* * *

ಹುಟ್ಟಿನಾ ಪರಿ!

ಹುಟ್ಟುವುದ ಕುರಿತು ಕೆಲವರು ಹೀಗೆ ಹೇಳುತ್ತಾರೆ :
ಕೆಲವರು ಪಡ್ಕೊಂಡ,
ಮತ್ತೆ ಕೆಲವರು ಹುಟ್ಟಿ ಪಡ್ಕೊಂತ್ತಾರೆಂತ.
ಈ ನಾಡಿನಲಿ ನರಿ-ನಾಯಿಗಳಂತೆ ಬದುಕಿರುವ ಜನ
ಹುಟ್ಟಿಹರು ಹೇಗೆ ?

ನನ್ನ ಹುಟ್ಟು ಅಪ್ಪನಿಂದ
ಅವ್ವ ಹೇಳಿದ ಸತ್ಯದ ಮಾತು
ಹಲವರಿಹರಿಲ್ಲಿ,
ದ್ವಿಜರೆಂಬ ದಿವ್ಯಜ್ಞಾನಿಗಳು
ಎರಡು ಬಾರಿ ಹುಟ್ಟಿಹೆವೆಂದು
ಶುದ್ಧ ಸುಳ್ಳು ಹೇಳುವ ಅಜ್ಞಾನಿಗಳು
ಒಮ್ಮೆ.... ಆಯ್ತು
ಮತ್ತೊಮ್ಮೆ....?

ಬ್ರಹ್ಮನ ತಲೆಯಿಂದ ಹುಟ್ಟಿಹೆವಯ್ಯ
ಎಂದೊಬ್ಬ ಬೀದಿಯಲಿ ಭಾಷಣ ಬಿಗಿಯುತ್ತಿದ್ದ.
ಉದರದಿಂದ ಹುಟ್ಟುವುದೇ ಕಷ್ಟವಾಗಿ
ಸಿಸರಿನ್ ಪ್ರಯಾಸ
ತಲೆಯಿಂದ ಉದಯಿಸುವ ಪರಿಯಾ ಕಂಡಿರಾ ನೀವೆಂದಾದರೂ
ಹೀಗೆ, ಹಲಹುಟ್ಟುಗಳು ಮಾರ್ಮಿಕ
ಹಲಹುಟ್ಟುಗಳು ಗೊಂದಲ
ಮತ್ತೆ ಕೆಲವು ವಿವಾದಾತ್ಮಕ.

ಈ ಹುಟ್ಟಿನ ಪರಿಯೇ ಹೀಗೆ
ಎಲ್ಲೋ ಆರಂಭವಾಗಿಬಿಡುತ್ತದೆ
ವರವಾಗಿ ಕೆಲವರಿಗೆ
ಮುಟ್ಟಿದ್ದೆಲ್ಲ ಚಿನ್ನವಾದಂತೆ

ಕರಿ ತಾ ನಡೆದದ್ದೇ ದಾರಿಯೆಂಬಂತೆ
ಒಲಿಯುತ್ತವೆ ಹತ್ತು ಹಲವು ಪ್ರಶಸ್ತಿಗಳು
ಹುಟ್ಟನ್ನಾಧರಿಸಿ.

ಕುವೆಂಪು, ರುದ್ರಪ್ಪ, ಕಣವಿ
ಹುಟ್ಟು ಕವಿಗಳು ಅಪವಾದವೆಂಬಂತೆ
ನಿಂತಿಹರಿದೋ ಈ ನಾಡ ಇತಿಹಾಸದಲಿ
ದಲಿತ ಸಿದ್ಧಲಿಂಗಯ್ಯ, ನಾಯಕ ಲಲಿತಾ
ಮಾಲಗತ್ತಿ ಅರವಿಂದ, ಚಂಪಾ, ಕಂಬಾರ,
ಹೇಮ, ಮಲ್ಲಿಕಾ, ಹುಟ್ಟಿ ಮೆಟ್ಟಿ ನಿಂತಿಹರು
ಹುಟ್ಟು ಕೆಲವರಿಗೆ ವರ ಕೆಲವರಿಗೆ ಶಾಪ
ಹುಟ್ಟು ಹಾರವ ಗುಲಾಮ ಗೋವಿಂದ
ಪರಾಕು ಸಾಮ್ರಾಟ
ಪರಾಕಾಷ್ಠತೆಯ ತಲುಪಿದನೀತ.
ಹುಟ್ಟು ದರಿದ್ರ ನಮ್ಮೂರ ಕೆಲವರು
ಲೋಕ ಕಾಣದೆ ಕಣ್ಣು ಮುಚ್ಚಿಹರು
ಶಂಕ್ರಿಯ ಸರದಾರರು
ಪಡೆದು ಹುಟ್ಟಿದ ಸುಖ
ಸಾವಾಗಿ ಪರಿಣಮಿಸೆ
ವಿಧವೆಯರನೇಕರು ಹುಟ್ಟು ಶಪಿಸುತಿಹರಿಲ್ಲಿ
ಜಂಜಡ ಬಿಡಿಸಲೋಸುಗ ಬದುಕಬೇಕು
ಹುಟ್ಟಿಹೆವು ಈ ನೆಲದ ಮೇಲೆ
ಬದಲಿಸಬೇಕು- ಹುಟ್ಟಿಗಂಟಿದ ಹಿಡಿಶಾಪವನು.

* * *

ಜಾತಿ ಮತ್ತು ಅವಳು

ಇವಳೊಬ್ಬ ಅಪರೂಪದ ಸುಂದರಿ
ನಕ್ಕರೆ ಉಕ್ಕುವುದೆನ್ನದೆ ರಕ್ತದೊತ್ತಡದಿ
ಸಿಕ್ಕಿದ್ದಳು ಸಂತೆಯಲ್ಲಿ ಕಿಚ್ಚಿಟ್ಟು ನನ್ನ ಮನಕೆ

ಕಣ್ಣ ಕವಣೆಯ ಪೆಟ್ಟು ಕೊಟ್ಟು ಹೋಗಿದ್ದಳಂದು
ಹೊಳ್ಳಿ ಬರಲಿಲ್ಲಾ ನೋವಿಗೆ ನಗುವ ಚೆಲ್ಲಲು
ಬಹುಶಃ ಮರೆತಿಹಳೆನ್ನ ಮನದನ್ನೆ.

ಅವಳದಂತೆ ದೊಡ್ಡ ಜಾತಿ
ನಾನೋ ಹುಟ್ಟಿಹೆನು ಮನುಷ್ಯ ಜಾತಿಯೊಳಗೆ
ಇದುವೆ ನಮ್ಮಿಬ್ಬರ ನಡುವಿನಂತರ.

ಲೇ ತಮ್ಮಾ ತೆಳ್ಳಗಿನ ಮನುಷ್ಯ
ದಪ್ಪನ ಕೋಟು ತೊಟ್ಟಿರಾದಾನೇನೋ
ದೊಡ್ಡ ಮನುಷ್ಯ ಅಂದಿದ್ದನೊಬ್ಬ (ಅ) ವಿವೇಕಿ

ಅವನ ಕೊರಳಪಟ್ಟಿ ಹಿಡಿದು ಬಾರಿಸಿ ಕೇಳಬೇಕು
ಪ್ರೀತಿಗುಂಟೇನಯ್ಯಾ ಇತಿಮಿತಿ
ತಿಳಿಯದವನಿಗೆ ಇದರ ಗತಿ.

ಆರಂಭವಾದಾಗ ಇರಲಿಲ್ಲೀ ಜಾತಿ
ನಡುವೆ ನಿಂತು ಹಚ್ಚಿದಿರಿ ಕಿಚ್ಚ
ಉರಿದು ಹೋದೆವು ನಾವು ಸಿಗದೆ ಮುಕ್ತಿ.

ಬುದ್ಧ ಬಸವ ಅಂಬೇಡ್ಕರ
ಹಸಿನೆಲದಾಗ ಬಿತ್ತಿರಬೇಕು ಸಮತೆ ಬೀಜ
ಮೊಳೆಯಲಿಲ್ಲಾ ಬೆಳೆಯಲಿಲ್ಲಾ ಫಲ ಕಾಣಲೇ ಇಲ್ಲ

ಬಾ ಗಾಂಧಿ ನೋಡಿಲ್ಲಿ ನೀ ಹುಟ್ಟಿದ ನಾಡಲಿ
ಕೋಮುದಳ್ಳುರಿ ಕೂಪ.
ಮತ್ತೊಂದಾದರೂ ಬಂದು ಬೋಧಿಸಿಯಾ ಶಾಂತಿಯ.

* * *

ದೇವರು

ಯಾರಿಗೂ ಅರ್ಥವಾಗದ
ವ್ಯರ್ಥ ವಾದ ವಿವಾದಗಳ
ತತ್ವಶಾಸ್ತ್ರಗಳ
ಪೂ....ಜಾರಿಗಳ
ಪಾಮಾರರ
ಪರಮಪೂಜ್ಯ ಕಾವಿಧಾರಿಗಳ
ಕಾವಿನೊಳಗೆ ಅವಿತು
ಓಂ ನಮಃ ಶಿವಾಯ ಎಂದೋ
ವಿಷ್ಣುವೆಂದೋ, ಮಹ್ಮದ್, ಜೀಸಸ್‌ನೆಂದು
ಅರ್ಥವಾಗಿ.
ಜಗವ ಸೃಷ್ಟಿಸಿದಾತನದೊಂದು
ವಿಕಾರ ರೂಪ.

* * *

ದಲಿತ

ಇತಿಹಾಸದಲ್ಲಿ
ಎತ್ತ ಹೊರಳಿದರೂ
ಬರಿ ನೋವು
ಶೋಷಣೆ
ಸೃಷ್ಟಿಸಿದವರ
ಗುಲಾಮನಾಗಿ
ಕಾಲಿಗೆ ಖೋಳ ಹಾಕಿಕೊಂಡು
ಜೀತ ದುಡಿಯುತ
ಹಾರು ಹಕ್ಕಿಯ ನೋಡಿ
ಸ್ವತಂತ್ರನಾಗುವಾಸೆಯಿಂದ
ಆಕಡೆ ಈ ಕಡೆ ನೋಡಿ
ಮತ್ತೆ ಭೂಮಿಯೊಳಗೆ
ಮುಖನೆಟ್ಟವ.

* * *

ಜಗದಿ ಉಳಿದಿಹುದಾದರೇನು ?

ಹೋದ ಕ್ಷಣದ ಮಧುರ ನೆನಪು
ನಾಳೆ ದಿನಕೆ ಆದುವೆ ಹುರುಪು
ನಾಕು ದಿನದ ಬದುಕ ಹೀಗೆ
ನೂಕಿ ನೂಕಿ ಸಾಗಬೇಕ.

ಬಿಟ್ಟುಹೋದರೆಮಗೆ ಜಗವ
ಕಳೆದು ಬನ್ನಿ ಋಣದ ಕಣವ
ಹೊತ್ತ ಹೊಣೆಯು ಬದುಕಿ ಕಳೆದು
ಬದುಕ ಬಂಡಿಗೊಂದು ಕೀಲಿ ಜಡಿದು.

ಜಗವಿದು ಕುಸ್ತಿ ಕಣವು
ಹೊಡೆಯಬೇಕು ಬೈಟು ಬಸ್ಕಿ ಬದುಕಲೋಸುಗ
ಹಿಡಿಯಹೊಂಟರದೋ ವಾಯು ಕುದುರೆಯಾ
ಸಿಕ್ಕರೂ ದಕ್ಕದು ಗೆಳೆಯಾ ತಿಳಿ ಅದರ ಪರಿಯಾ.

ಅದೋ ನೋಡು ಓಡುತಿದೆ ಹೊತ್ತು ಹಿಡಿ
ನೀ ಮುಂದೋ ಅದು ಮುಂದೋ ತಿಳಿವರಾರು
ಹುಟ್ಟಿಬಂದ ಸೂರ್ಯನಿಂದು ಮುಳಗ ಹೊರಟನು
ಬಂದ ಕೆಲಸ ಮುಗಿಸಿಕೊಂಡು ಹೊರಡು ಇನ್ನೇನು ?

* * *

ಹೆಂಗಸು ಮತ್ತೊಂದಿಷ್ಟು

ನೆರೆತ ಕೂದಲು ಸುಕ್ಕು ಸುಕ್ಕಾದ ಮುಖಮುದ್ರೆ
ಮುರುಕು ಚಪ್ಪರದೊಳಗೆ ಮುಲಕುತ್ತಾಳೆ
ಮುದುಕಿ ಕಣ್ಣಲೇ ಗಾವುದ ಗಾವುದ ದೂರವನ್ನ ಅಳೆಯುತ್ತಾಳೆ
ಹೋದ ಯೌವ್ವನ ಕವುದಿಯೊಳಗೆಲ್ಲೋ ಇರಬೇಕೆಂದು ಕೊಡವುತ್ತ
ನಾಳೆ ಸತ್ತರೆ ಎತ್ತಿ ಸಾಗಿಸಲಿಲ್ಲದ ಜನರಿಗಾಗಿ ಕಾಯುತ್ತಿದ್ದಾಳೆ.

ಎಲ್ಲಿ ಹುಟ್ಟಿತು ಜೀವ ಸಾಗಿದ ದಿಕ್ಕು ಯಾವುದು
ಗೊತ್ತುಗುರಿಯಿಲ್ಲದೆ ನಡೆದು ನಿಂತನೆಲೆ
ಫಲ ಬಿಡಲಿಲ್ಲಾ, ಫಸಲು ಕಾಣಲಿಲ್ಲಾ
ನಿತ್ಯ ಜೀವದೊಡನೆ ತಿಕ್ಕಾಡಿ ತಿಕ್ಕಾಡಿ
ನಿದ್ದೆ ಬಾರದ ರಾತ್ರಿಗಳ ಕರಾಳತೆ ಹೊಡೆದೋಡಿಸಲು
ಶರಣಾದಳು ಸರಾಯಿಗೆ.

ಯಾರು ಈ ತಾಯಿ ? ಸೀತೆ, ಸಾವಿತ್ರಿ, ಶಬರಿಯಂತೆ
ಇತಿಹಾಸ ಸೃಷ್ಟಿಸಲಿಲ್ಲಾ
ಹಾಸಲಿಲ್ಲದ ಹಾಸಿಗೆ, ಹೊದೆಯಲಿಲ್ಲದ ಹೊದಿಕೆಗಾಗಿ
ವರುಷಗಳನ್ನೆ ಕಾದು,
ಸತ್ತನಂತರ ನಾರಬಹುದಾದ ದೇಹಕ್ಕಾಗಿ ಬದುಕಿದಾಗಲೇ
ತವಕಿಸಿದವಳು

ಬಿಟ್ಟು ಹೋಗಿದ್ದಾಳೆ ಅದೇ ನೆಲ,
ನಾಕು ಕಡೆಗೆ ಚಪ್ಪರ ಹಾಕಿ ಹೊದಿಸಿ ಮನೆಯೆಂಬ ಅರಮನೆ
ನಾಕು ಕೋಳಿ, ಒಂದು ಎಮ್ಮೆ, ಇತ್ಯಾದಿ....
ಜೊತೆಗೂಡಿದ ಆ ದಿನಗಳು
ಊರೆಂಬೂರಿಗೆ ತಿಳಿದಿತ್ತು, ಅನಾಥೆ ಅಬಲೆ ಬದುಕ

ಎಲ್ಲರ ಬದುಕಿಗೂ ತವಕಿಸಿ
ತನ್ನ ಸಂತತಿಗಾಗಿ ಚಿಂತಿಸದೆ
ಕೋಟಿ ಕೂಡಿಸಿ– ಮತ್ತೊಬ್ಬರ ಬದುಕ ಕಬಳಿಸಿದ ಅವರಿಗೆ
ಅಪರೂಪದ ಮಾದರಿ,
ಬಿಟ್ಟು ಹೋದಳು ನನ್ನಂತಹವನ ಎದೆಯೊಳಗೆ
ನೆನಪ ಕೆಲ ಕ್ಷಣಗಳ ನನ್ನಿರುವಿಕೆಯು ಗುರುತಿಸಲು.

* * *

ಹೂ ಮತ್ತು ನಾನು

ಯಾವ ತರುಲತೆಯಲಿ ಅರಳಿತು ಕುಸುಮ
ಇಹುದಿದಕೆ ಹೆಸರು ಸುಮ.
ಸುಡುಬಿಸಲು ಬರಡು ನೆಲಾ
ಬಿರಿದ ಎರೆ ಭೂಮಿಯಲ್ಲಿ ಮೊಳೆತೊಂದು ಬಳ್ಳಿ.

ಬಾನು ಕರಗಿ ಮಳೆಯು ಸುರಿಯೇ
ಚಿಗುರಿ ಚೇತೋಹಾರಿಯಾದ ನೆಲದೊಳಗೆ
ನಳಿ ನಳಿಸಿ ಬಂಗಾರ ಬಣ್ಣದಿ ಮೊಗ್ಗಾತು ಹಿಗ್ಗಿ ಹೂವಾತು
ಅಗ್ಗವಾಗಲಿಲ್ಲ ದುಗ್ಗಾಣಿಗೆ–ಕಾಡ ಕುಸುಮ.

ಕಾಡಿತು ದುಂಬಿಗಳಿಗೆ ಮಧು ಕೊಡದೆ
ಸೂರ್ಯನುದಯಕೆ ತೆರೆದುಕೊಂಡೊಡನೆ ಸೂಸಿತು ಚೆಲುವು
ನನ್ನೆದೆ ಇರಿಯಿತು
ಮುಟ್ಟಲೇನೆ ಚೆಲುವೆ ನಿನ್ನ ಮೈ ?

ಒರಟು ಕೈಗಳಿಂದ ಮೃದು ಎದೆಯ ಸವರಿ
ಬಿರಕು ತುಟಿಗಳಿಂದ ಗಲ್ಲವ ಗೀರಿ
ರಸ ಬರಿಸಿ ಹೀರಬೇಕು ಚೆಲುವ
ಸೋರಿ ಹೋಗುವ ಮುನ್ನ.

ಸೋತ ನನ್ನೊಲವ ಬನದಲ್ಲಿ ಬಾ
ನಿನ್ನ ರೂಪಕ್ಕೊಂದು ಮೆರಗು ಬಂದೀತು
ಅಮರವಾದೀತು ಕವನ
ನಿನ್ನ ಚೆಲವು–ಒಲವ ಹೊಗಳಿ.

ಓ ನನ್ನ ಹೂವೆ, ಮುಳ್ಳ ಮರೆಯಲಿ ನಿಂತು
ಹೊರಳಾಡಬೇಡ ಭ್ರಮಣ ಕಾಲಕ್ಕಿನ್ನ ಬಲಿಗೊಡಬೇಡ
ತೆರೆ ನಿನ್ನ ಪಕಳೆಗಳ ಹೀರುವೆ ಮಧುವ
ಬಾಡಿ ಹೋಗುವ ಮುನ್ನ ನಿನ್ನ ಯೌವ್ವನದೈಸಿರಿ.

* * *

ಒಂದು ಸತ್ತ ಕಾಗೆ ಸುತ್ತ

ಸತ್ತ ಕಾಗೆಯ ಸುತ್ತ ಸಾವಿರಾರು ವಿಚಾರಗಳು
ಉದ್ಭವಿಸುತ್ತವೆ ಹಾಳು ತಲೆಯೊಳಗೆ
ನಮ್ಮ ಭಟ್ರು, ಶೆಟ್ರು, ಇತ್ಯಾದಿ ಕವಿಗಳಿಗೆ
ಕಾಗೆ ಅಪಶಕುನದ ಪ್ರತೀಕ.
ಕರಿಯ ಬಣ್ಣವ ಜರಿಯುವ ಪರಿ ಹೀಗೆ–

ಮನ್ನೆ ಯಾರೋ ಒಬ್ಬಾತ ಸತ್ತ
ಅವನ ಶ್ರಾದ್ಧದ ಪಿಂಡ ಹೆಕ್ಕಲು ಬಾರದ ಕಾಗೆ ಕಂಡು
ಆತನ ಪಾಪದ ಗುಣಗಾನ ಮಾಡಿದ್ದು
ಕಾಕರಾಯನಿಗೆ ಸಂದ ಗೌರವವೆ
ಒಂದೊಮ್ಮೆ ಪಕ್ಷಿಸಂಕುಲದ ಅತಿ ಶೂದ್ರ ಪಕ್ಷಿಯೆ ?
ಎಂದು ಕಾಡದೆ ಬಿಡದು.

ಮುಂಜಾನೆ ಮುಸುಕಿನಲಿ ದರಿದ್ರ ಮಾನವನಿಗೆ
ಗೋಡೆ ಗಡಿಯಾರದಂತೆ ವೇಳೆ ಹೇಳುವುದು
ಇರುಳಿನಲಿ ಬಳಗದೊಂದಿಗೆ ಸೇರುವ ಪರಿ ಪ್ರಶಂಸನೀಯ
ಆದರೂ ಏಕೀ ತಗಾದೆ ಮಾನವನದು,
ಶನಿ ಮನೆ ಹೊಕ್ಕೀತೆಂಬ ಕಂಪ್ಲೆಂಟ್,
ಮಗನ ತಲೆ ಮೇಲೆ ಕುಳಿತ ಕಾಗೆಗೆ ಹಿಡಿಶಾಪ
ಭಟ್ಟರ ಹತ್ತಿರ ಅದಕ್ಕೊಂದು ಪರಿಹಾರ.
ಮನುಷ್ಯ ನಿರ್ಮಿಸಿದ ಜಾತಿ ಸಮಸ್ಯೆಯೊಂದಿಗೆ
ಪಾಪಿ ಮನಸಿಗೆ– ಕಾಗೆಯೂ ಬಲಿಯಾಗಿ
ಅಸ್ಪೃಶ್ಯ ಹಕ್ಕಿಯಾಗಿರಬೇಕು.
ನಾವು ಹೀಗೆ ಅಸಮಾನತೆ ಬೆಳೆಸುವವರು
ಸುಳ್ಳಿನ ಮೇಲೆ ಇತಿಹಾಸ ಸೃಷ್ಟಿಪ ಅಕ್ಷರ ಸಂಸ್ಕೃತಿಯ
ಪಿತ ಬೂಜ್ವಾರ್ಗಗಳು ಇಲ್ಲಿಯೂ ಕೈಯಾಡಿಸಿಹರು
ಕಾಕರಾಯ ಕರೆಂಟ್ ಹಿಡಿದು ಆತ್ಮಹತ್ಯೆ ಮಾಡಿಕೊಂಡಿಹವೆ
ನಾನು ಅನುಮಾನಿಸಿದೆ.

* * *

ಒಂದು ಜೀವ ಮತ್ತು ನಿದ್ದೆ

ಸುತ್ತ ಜಲದ ನಡುವೆಯೊಂದು
ಬೆತ್ತಲೆ ದೇಹ ನಿದ್ದೆಗಾಗಿ ಹೋರಾಡುತ್ತಿದೆ
ಮಳೆರಾಯ ಮುಗಿಲ ಹರಿದು ಧೋ ಎಂದು ಸುರಿಯುತ್ತಿದ್ದಾನೆ
ಯಾವ ಚಿಂತೆಯೂ ಇಲ್ಲದೆ ಮಲಗಿರುವುದೇ ಈ ಜೀವ ?
ಹಳೆಯ ನೆನಪುಗಳೆಂದೋ ನಲಗಿಹೋಗಿವೆ
ನಾಳೆಗಳ ಚಿಂತೆ ಎಂದೋ ಚಿತೆ ಏರಿವೆ
ಮೀನು ಮಾರುಕಟ್ಟೆಯ ಮುಂದಿನ ಜಾಗವೆ
ತನ್ನ ವಿಶ್ರಾಂತಿ ಧಾಮ.
ಹರಕು ಚಾದರ ಹೊದ್ದು ಗಡದ್ದಾಗಿ ಮಲಗುವ ನಾಟಕ
ಮಾತು ಮೌನಗಳ ನಡುವೆ ಸ್ನಿಗ್ಧ ಮನ.
ಉಂಡೂಟಕ್ಕೂ ಕಂಡುಂಡ ಬದುಕಿಗೂ
ಬರಾಬರಿ
ಬಿಡುಗಡೆಯ ಘಳಿಗೆ ಬಂದೀತೆಂದು
ಬಹು ಖುಷಿಯಿಂದಲೇ ಮುಸುಕೊಳಗೆ
ಮುಸಿ ಮುಸಿ ಅಳು.
ಭಾಡಿಗೆ ದೇಹ ಬಿಟ್ಟು ಹೊರಟೇನೆಂದು
ಹುಟ್ಟಿಸಿದವನ ಮೇಲೆ ದಾವೆ ಹೂಡಿ
ಉಲ್ಟಾ ತಿರುಗುವ ಮಂದಿಯಂತೆ
ದಾವೆ ಹಾಕೇನೆಂದರೆ ಕೋರ್ಟಿಲ್ಲಾ ಕಛೇರಿ
ಪಟ್ಟು ಪಾಡನ್ನ ಬಿಟ್ಟು
ಹೋಗುವ ಪರಿಯ ಹೊರೆಹೊತ್ತು
ಬೆಳಗಾಗುವುದ ಕಾದು.
ಏಳಲಾಗದೆ, ಮಲಗಲೂ ಆಗದೆ
ನಾಟಕ ನಡೆದಿದೆ.... ನಿದ್ದೆ ಎಂಬ ನಿವಿರಾದ ಮೋಜಿನ
ಮಾಯಾಜಾಲದ ದೊಡ್ಡಾಟ.

* * *

ಬಾಬಾಸಾಹೇಬ್ ಮತ್ತು ನಾವು

ಹುಟ್ಟು ಹೋರಾಟಗಾರನೀತ
ಠೀಕುಠಾಕಿನ ಪೋಷಾಕು
ತಲೆತುಂಬ ದಲಿತರದ್ದೆ ಚಿಂತೆ
ಸ್ವತಂತ್ರ ಬದುಕಿನ ನಮ್ಮ ಕನಸಿನ ಸಹಕಾರಮೂರ್ತಿ.

ಮನುಜರಿಲ್ಲದ ನಾಡಿನಲಿ
ಮನಸುಗಳ ಸೃಷ್ಟಿಸಿದನಾತ
ಒಡೆದಾಳುವ ಪಂಡಿತರ ಜುಟ್ಟು ಹಿಡಿದು
ಧರ್ಮದ ತಿರಳ ತಿಳಿಹೇಳಿದ ಪರಾಕ್ರಮಿ.

ತಲೆ ಎತ್ತದವರೆಷ್ಟೋ ಜನ
ನೆಲ ನೋಡಿ ನೋವ ಮರೆತ್ತಿದ್ದರಂದು
ಕ್ರಾಂತಿ ಕಿಡಿಯನ್ನ ಹೊತ್ತಿಸಿ
ಏಳಿ ನನ್ನ ಜನರೆ ನಿಮ್ಮ ಬದುಕು ನಿಮ್ಮ ಕೈಯಲ್ಲಿದೆ ಎಂದನಾತ.

ಹಂದಿ-ನಾಯಿಗಳಂತೆ ದಲಿತರು
ಉಳ್ಳವರ ಗುಲಾಮರಾಗಿದ್ದರು
ಸ್ವಾಭಿಮಾನದ ಕಿಡಿಯು ಹೊತ್ತಿಸಿ
ಜಗದ ಜನರಿಗೆ ಸಮಾನತೆ ಪಾಠ ಕಲಿಸಿದ ಮಹಾಮಾನವ

ಬಾಬಾಸಾಹೇಬ ಹುಟ್ಟದಿದ್ದರೆ
ಬರೆಯುತ್ತಿರಲಿಲ್ಲ ಹೀಗೆ ತಮ್ಮೊಳಗಿನ ನೋವ ಕುರಿತು
ಯೋಜಿಸುತ್ತಿರಲಿಲ್ಲ ತಮ್ಮ ಬದುಕ ಕುರಿತು
ಗುಡಗುತ್ತಿರಲಿಲ್ಲ ಗುಂಡುಗಳಂತೆ.

ಮನುಷ್ಯರಾದರೋ ನನ್ನ ಜನರು
ಹೊಸದೊಂದು ಬದುಕಿಗಂಟಿಕೊಂಡು
ಬಸವಳಿದ ಶತಮಾನದ ಮೇಲೆ
ಸವಾಲು ಎಸೆಯಬಲ್ಲರು ಎದೆ ಸೆಟೆಸಿ ನಿಲ್ಲುವರೆದುರಿಗೆ

* * *

Fashion

ನಮ್ಮೂರ ಮುದುಕಿ

ಹರಿಯಾರ ಸಂತಿಯೊಳಗ
ಅರ್ಧ ತೋಳ ಹರಿದ
ಮುದುಕಿ ಕಂಡು
ಶಿವ ಶಿವ ಶಿವ ಎಂದಳು

ತುಟಿ ರಂಗಿನವಳ ಕಂಡು
ಯಾ ಪಾರ್ಟ ಮಾಡ್ತೀರಿ
ಎಂದಿದ್ದಳು.

ಕರಾಪಿನ ಹುಡುಗಿ ಕಂಡು
ಹುಡಗಾ
ಹಿಂಗ್ಯಾಕ ಮಾಡಾಕ ಹತ್ತಿ ಅಂದಿದ್ದಳು

ನಾ ಹುಡುಗಿ ಬೇ
ಕಣ್ಣ ಕಾಣ್ತಾವಿಲ್ಲ

ಐ ನನ ಶಿವನ
ಯಾ ಕಾಲ ಬಂತ ನಮ್ಮವ್ವ
ಎನ್ನುತ್ತಿದ್ದಂತೆ
Fashion ಅಜ್ಜಿ ಎಂದಾಗ
ಮೂರ್ಛೆ ಹೋಗಿದ್ದಳು.

* * *

ಬ್ಯೂಟಿ ಪಾರ್ಲರ

ಹಲೋ
ಎಂದು
ಬೆನ್ನಿಗೆ ಹೊಡೆದೆ
you idiot
ಹೆಣ್ಣು ಧ್ವನಿ ಕೇಳಿ
ಕಕ್ಕಾವಿಕ್ಕಿಯಾದೆ
ಬೆವರಿಳಿದ
ಮುಖವರಿಳಿಸಿ
sorry ಎಂದು ನಕ್ಕೆ.

ನನ್ನ ಗೆಳೆಯಾ
ನಿಮ್ಮಹಾಗೆ ಇದ್ದ
ಮಾತು ಹೊರಡಲಿಲ್ಲ
ತಪ್ಪಿನ ಅರಿವಾಗಿ
ಓಂದಿರುಗಿದೆ
ಬ್ಯೂಟಿ ಪಾರ್ಲರ್
ಶಪಿಸುತ.

* * *

Lipstick

ನಮ್ಮೂರ
ನಂಜುಂಡ
ಪಾರ್ಟಿಯೊಳಗ
ಕೆಂದುಟಿ
ಹೆಂಗಸೊಬ್ಬಳ ಕಂಡು
ಅಮ್ಮ
ನಿಮ್ಮ
ತುಟಿ ಹೊಡೆದು
ರಕ್ತ ಬರ್ತ್ತಿದೆ ಎಂದ.
ಎ,
ನಾನಿನ್ನು
ಮದವೆ ಆಗಿಲ್ಲಾ
ಬೇಕೂಪ್
ಎಂದುದ ಕೇಳಿ
ತಲೆ ಮೇಲೆ
ಕೈಹೊತ್ತು ಕುಂತ.

* * *

ಮೈಕ್ ನುಂಗುವ-ಮಹಿಳೆ ಮತ್ತು ನೈಜತೆ

ಹವಾನಿಯಂತ್ರಿತ ಕೋಣೆಯೊಳಗಿರಳ ಕಳೆದವಳು
ಹೂವಂತರಳಿ ಬಿರಿದವಳು,
ದುಂಬಿಗಳಿಗೆ ಮೈಯೊಡ್ಡಿ ಮನಸಾನಿಚ್ಛೆ
ಮದೋನ್ಮತ್ತಳಾದವಳು
ಭಾಷಣ ಮಾಡುತ್ತಾಳೆ ಪಬ್ಲಿಕ್‌ನಲ್ಲಿ ನಿಂತು
ಬಡವರು ಕೇಳಿ ಬಸವಳಿಯುವಂತೆ

ಹೆರಿಗೆ ನೋವು ಹೆತ್ತವಳಿಗೆ ಗೊತ್ತು
ಹೆರದವಳೇನು ಬಲ್ಲಳು-ನೋವ
ದಾರಿಯಲಿ ಉಂಡು ನೀರಿಲ್ಲದೆ ಶ್ರಮಿಸಿದವಳು ಅವಳು
ಅಸಹಾಯಕತೆ ಅಸ್ತ್ರ ಮಾಡಿ
ಬಿಡುತ್ತಾಳೆ ತನ್ನ ರಾಜಕೀಯದ ಒತ್ತಾಸೆಗಾಗಿ
ನಾಜುಕು ನಲ್ಲೇ- ನವೀರಾಗಿ ಮಾತನಾಡುತ.

ದಿಲ್ಲಿ ಗದ್ದುಗೆ ಏರಿದೊಡನೆ
ಮೇಜು ಕುಟ್ಟುತ್ತಾಳೆ ಮೊದಲೆರಡು ಸಾರಿ ಮುಂದಿ ಕಂಡಾರೆಂದು.
ಮತ್ತದೇ ಹಳೆ ಚಾಳಿ,
ನಾಯಿಯಂತೆ ನಾಲಿಗೆ ನೀರೂರಿಸುವ ನಿಮ್ಮ ಪುಡಾರಿಗಳಿಗೆ
ನೆತ್ತಿಗೇರಿ ಕಾಮ
ಗತ್ತಿನಲ್ಲೆ ನಕ್ಕು ನತ್ತ ಸೇವೆ ಕೊಡುತ್ತಾಳೆ
ದಿಲ್ಲಿ ದರ್ಬಾರಿನ ಯುವ ರಾಣಿಯಂತೆ.

* * *



ಮೀನು ಮತ್ತು ಹುಡುಗಿ

ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕಿನ ಶಿರಗಾನಹಳ್ಳಿ ಗ್ರಾಮದ ಶಾಂತನಾಯ್ಕ ಶಿರಗಾನಹಳ್ಳಿ ಸಾಹಿತ್ಯ ಕ್ಷೇತ್ರಕ್ಕೆ ಹೊಸಬರಲ್ಲ. ಗುಡ್ಡದ್ಹ ಕಥಾ ಸಂಕಲನದ ಮೂಲಕ ತಾವೊಬ್ಬ ಸೂಕ್ಷ್ಮ ಸಂವೇದನಾಶೀಲ ಲೇಖಕನೆಂದು ಈಗಾಗಲೇ ಸಾಬೀತು ಮಾಡಿ ತೋರಿಸಿದ್ದಾರೆ. ಪ್ರಸ್ತುತ ಮೀನು ಮತ್ತು ಹುಡುಗಿ ಕಾವ್ಯ ಸಂಕಲನದ ಮೂಲಕ ಕವಿಯಾಗಿ ಕನ್ನಡ ಸಾರಸ್ವತ ಲೋಕಕ್ಕೆ ಕಾಲಿಡುತ್ತಿದ್ದಾರೆ. ಬಂಡಾಯದ ಮನಿಫೆಸ್ಟೋ ಮಟ್ಟದ ಕಾವ್ಯವಾಗಿ, ಧ್ಯಾನಸ್ತ ಸ್ಥಿತಿಗೆ ಮುಟ್ಟುವ ಹಂತದಲ್ಲಿ ಶಾಂತನಾಯ್ಕ ಕವಿತೆ ಬರೆಯತೊಡಗಿದರು. ದಲಿತ ಲೋಕದ ನೆಲೆಯಿಂದ ಬಂದ ಈ ಲೇಖಕ ಧಾರವಾಡದಲ್ಲಿ ಸ್ನಾತಕೋತ್ತರ ಪದವಿ ಪಡೆಯುವ ಹೊತ್ತಿಗೆ ನವೋದಯ ನವ್ಯದ ಕಾಲಘಟ್ಟ ದಾಟಿದ ಧಾರವಾಡದ ಕಾವ್ಯಲೋಕ, ಇಪ್ಪತ್ತನೇಯ ಶತಮಾನದ ಅನಿವಾರ್ಯ ಕ್ರಿಯೆಯಾದ ನಗರೀಕರಣದ ಪ್ರಕ್ರಿಯೆಯಲ್ಲಿ ಕ್ಷಿಪ್ರವಾಗಿ ವ್ಯಯಾರಗೊಂಡು ನಳನಳಿಸುತ್ತಿತ್ತು.

ಗ್ರಾಮೀಣ ಬುಡಕಟ್ಟುಗಳ ಸಂಕೀರ್ಣ ಲೋಕದ ಬಡತನ ಅವಮಾನ ಕೀಳರಿಮೆಯೇ ದ್ರವ್ಯವಾದ ನೆಲೆಯಿಂದ ಬಂದ ಈ ಮುಗ್ಧ ಲೇಖಕನನ್ನು ನಮ್ಮ ಏಕರೂಪ ಸಂಸ್ಕೃತಿ ಹಾಗೂ ಅದರಿಂದ ದತ್ತವಾದ ಭಾಷೆ ವಿಸ್ಮೃತಗೊಳಿಸಿದರಲ್ಲಿ ಅಚ್ಚರಿಯಿಲ್ಲ. ಹಾಗಾಗಿ ಮಿತ್ರ ಶಾಂತನಾಯ್ಕರ ಈ ಸಂಕಲನದಲ್ಲಿ ದಲಿತಲೋಕದ ಅವಮಾನ ಕೀಳರಿಮೆ, ಬಡತನದ ವಿವರಗಳು ಸಮೃದ್ಧ ಭಾಷೆಯ ಛಾಯೆ ಹೊದ್ದು ಬರುತ್ತವೆ. ಹಾಗೆಂದರೆ ಇದು ಏಕರೂಪ ಸಂಸ್ಕೃತಿಯು ತಂದೊಡ್ಡಿದ ಭಾಷೆಯ ಗೆಲುವು ಅಲ್ಲ. ಇಂಥ ವಿಸ್ಮೃತಿ ಕಳೆದಯುಗದ ಮಹಾನ್ ಲೇಖಕ ಕವಿ ಕುವೆಂಪು ಅವರನ್ನು ಮರಳುಗೊಳಿಸಿದೆ. ನವೋದಯದ ಮೋಡಿಗಾರ ಕವಿ ಬೇಂದ್ರೆ ಮಾತ್ರ ಇಂಥ ವಿಸ್ಮೃತಿಯಿಂದ ಬಿಡಿಸಿಕೊಂಡು ನೆಲದ ಮಣ್ಣಿಗೆ ಮರಳಿದ್ದು ಶಾಂತ ನಾಯ್ಕ ರಂಥ ತರುಣ ಕವಿಗಳು ಅರ್ಥ ಮಾಡಿಕೊಳ್ಳಬೇಕಾಗಿದೆ.

ಈ ನಿಟ್ಟಿನಲ್ಲಿ ಮುಂಬರುವ ದಿನಗಳಲ್ಲಿ ಅವರು ತಮ್ಮ ಬಾಲ್ಯ, ಯೌವ್ವನ, ಬುಡಗಟ್ಟುಗಳ ಜೀವ ದ್ರವ್ಯವಾದ ಭಾಷೆಯ ಅನುಭವಗಳ ನೆರವಿನಿಂದ ಹೊಸಕಾವ್ಯ ಕೊಡಲು ಶ್ರಮಿಸಬೇಕಾಗಿದೆ. ಅಂಥ ಶ್ರಮ ಪ್ರತಿಭೆ ಈ ಕವಿಯಲ್ಲಿದೆ. ಕ್ಷಣ ಕ್ಷಣಕ್ಕೂ ಬದಲಾಗುವ ನಾಗರೀಕರಣ, ಜಾಗತೀಕರಣ ಪ್ರತಿಕ್ರಿಯೆಯ ದುರಂತದಲ್ಲಿ ಮನುಷ್ಯನ ವಿಚಿತ್ರ ನಡುವಳಿಕೆಯನ್ನು ಬೆರಗುಗಣ್ಣುಗಳಿಂದ ನೋಡುವ ಈ ಯುವಕನಿಗೆ ಅದು ಸಾಧ್ಯವಾಗಲೆಂದು ನಾನು ಹಾರೈಸುತ್ತೇನೆ.

ಯಲ್ಲಾಪುರ | ಮೋಹನ ಕುರಡಗಿ